**ದಿನಾಂಕ: 08–03–2012 ರಂದು ಬೆಳಿಗ್ಗೆ 11.00 ಘಂಟೆಗೆ ತೋಟಗಾರಿಕೆ ಸ್ಥಾಯಿ ಸಮಿತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಉದ್ಯಾನವನಗಳ ಅಭಿವೃದ್ಧಿ ಮತ್ತು ನಿರ್ವಹಣೆ / ಕೆರೆಗಳು –ಪರಿಸರ ಕೋಶ / ನಗರವ್ಯಾಪ್ತಿ ಅರಣ್ಯೀಕರಣ ಮತ್ತು ಪರಿಸರ ನಿರ್ವಹಣೆಗೆ ಸಂಬಂಧಪಟ್ಟಂತೆ ನಡೆದ ಸಭೆಯ ನಡವಳಿಗಳು**

| ಹಾಜರಿದ್ದ ಸದಸ್ಯರು | | | | ಹಾಜರಿದ್ದ ಅಧಿಕಾರಿಗಳು |
|---|---|---|---|---|
| ಶ್ರೀಯುತರಾದ :– | | | | |
| 1 | ರ.ಆಂಜನಪ್ಪ | ಅಧ್ಯಕ್ಷರು | 1 | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| 2 | ಎನ್.ಎಂ.ಕೃಷ್ಣಮೂರ್ತಿ | ಸದಸ್ಯರು | 2 | ಉಪ ಅರಣ್ಯ ಸಂರಕ್ಷಣಾಧಿಕಾರಿ (ಉತ್ತರ & ದಕ್ಷಿಣ) |
| 3 | ಬಿ.ಆರ್.ಚಂದ್ರಶೇಖರ್ | ಸದಸ್ಯರು | 3 | ಕಾರ್ಯಪಾಲಕ ಅಭಿಯಂತರರು(ಪರಿಸರ ಕೋಶ–ಕೆರೆಗಳು) |
| 4 | ಹೆಚ್.ಎನ್.ಗಂಗಾಧರ್ | ಸದಸ್ಯರು | 4 | ಕಾರ್ಯಪಾಲಕ ಅಭಿಯಂತರರು(ಯೋಜನೆ– ಪೂರ್ವ/ಪಶ್ಚಿಮ/ ದಕ್ಷಿಣ/ ರಾಜರಾಜೇಶ್ವರಿನಗರ/ ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ) ವಲಯ |
| 5 | ಗೀತಾ ಶ್ರೀನಿವಾಸರೆಡ್ಡಿ | ಸದಸ್ಯರು | | |
| 6 | ಆರ್.ಎಸ್.ಸತ್ಯನಾರಾಯಣ್ | ಸದಸ್ಯರು | | |
| 7 | ಕೆ.ದೊಡ್ಡಣ್ಣ | ಸದಸ್ಯರು | 5 | ತೋಟಗಾರಿಕೆ ಅಧೀಕ್ಷಕರು (ಪೂರ್ವ/ಪಶ್ಚಿಮ/ದಕ್ಷಿಣ/ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ/ರಾ.ರಾ.ನಗರ)ವಲಯ |
| 8 | ಅಶ್ವಥ್‌ನಾರಾಯಣ್.ಜಿ.ಎ. | ಸದಸ್ಯರು | | |
| 9 | ಎಸ್.ವಿಜಯನ್ | ಸದಸ್ಯರು | 5 | ಅರಣ್ಯಾಧಿಕಾರಿಗಳು(ಪೂರ್ವ/ಪಶ್ಚಿಮ/ದಕ್ಷಿಣ/ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ/ರಾ.ರಾ.ನಗರ)ವಲಯ |

**(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)**

ಮಾನ್ಯ ಆಧ್ಯಕ್ಷರು ಸಭೆಯ ಅಧ್ಯಕ್ಷತೆ ವಹಿಸಿ ಹಾಜರಿದ್ದ ಸಮಿತಿ ಸದಸ್ಯರು ಮತ್ತು ಅಧಿಕಾರಿಗಳಿಗೆ ಸ್ವಾಗತ ಕೋರಿ ಮಾತನಾಡುತ್ತಾ, ಉದ್ಯಾನವನಗಳ ಅಭಿವೃದ್ಧಿ, ನಿರ್ವಹಣೆ, ನಗರವ್ಯಾಪ್ತಿ ಅರಣ್ಯೀಕರಣ ಮತ್ತು ಪರಿಸರ ನಿರ್ವಹಣೆಗೆ ಸಂಬಂಧಪಟ್ಟಂತೆ ಹಾಗೂ (ಕೆರೆಗಳು ಪರಿಸರ ಕೋಶ) ಕೆರೆಗಳ ಅಭಿವೃದ್ಧಿಗೆ ಸಂಬಂಧಪಟ್ಟಂತೆ 2011–12ನೇ ಸಾಲಿನ ಆಯವ್ಯಯದಲ್ಲಿ ಇರುವ ಅನುದಾನಕ್ಕೆ ಅನುಗುಣವಾಗಿ ಕಾರ್ಯಕ್ರಮ ಪಟ್ಟಿಗೆ ಸಂಬಂಧಪಟ್ಟಂತಹ ಕಡತಗಳು ಯಾವ ಯಾವ ಹಂತದಲ್ಲಿದೆ ಎಂಬ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿದರು.

ಸಮಿತಿಯ ಮುಂದಿರುವ ವಿಷಯಗಳ ಬಗ್ಗೆ ಅಧ್ಯಕ್ಷರು, ಸಮಿತಿಯ ಸದಸ್ಯರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ, ಈ ಕೆಳಕಂಡಂತೆ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು.

1. **ವಿಷಯ ಸಂಖ್ಯೆ:ತೋ/ಸ್ಥಾ/ಸ/41/ 11–12, ದಿನಾಂಕ: 12–01–2012**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ.151, ಕೋರಮಂಗಲ ವಾರ್ಡಿನ 3ನೇ ಬ್ಲಾಕ್, 12ನೇ ಮುಖ್ಯರಸ್ತೆಯಲ್ಲಿನ ಉದ್ಯಾನವನವನ್ನು M/S GRAND MERCURE BANGALORE, 12th Main, 3rd Block, Koramangala ರವರು ಒಂದು ವರ್ಷದ ಅವಧಿಗೆ ದತ್ತು ಆಧಾರದಂತೆ ನಿರ್ವಹಿಸಲು ಕೋರಿರುತ್ತಾರೆ. ಈ ಬಗ್ಗೆ ಪಾಲಿಕೆಯ ಸಭೆಯ ತೀರ್ಮಾನಕ್ಕಾಗಿ ಮಂಡಿಸುವ ನಿಟ್ಟಿನಲ್ಲಿ ತೋಟಗಾರಿಕೆ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ವಿಷಯವನ್ನು ಪಾಲಿಕೆಯ ಸಭೆಗೆ ಮಂಡಿಸಲು, ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರ ದಿನಾಂಕ: 28–12–2011 ರ ಟಿಪ್ಪಣಿ.

**ನಿರ್ಣಯ: – ದಿನಾಂಕ: 28–12–2011 ರ ವಿಶೇಷ ಆಯುಕ್ತರ ಟಿಪ್ಪಣಿಯನ್ನು ಒಪ್ಪಲಾಯಿತು ಹಾಗೂ ವಿಷಯವನ್ನು ಪಾಲಿಕೆಯ ಸಭೆಯ ಮುಂದೆ ತರಲು ತೀರ್ಮಾನಿಸಲಾಯಿತು**

ಮುಂದುವರೆದಿದೆ. . . .

## 2. ವಿಷಯ ಸಂಖ್ಯೆ:ತೋ/ಸ್ಥಾ/ಸ/44/ 11–12, ದಿನಾಂಕ: 30–01–2012

ಉಪ ಮಹಾಪೌರರು ತಮ್ಮ ಪತ್ರ ಸಂಖ್ಯೆ:ಉ.ಮ.ಪೌ.ಅ.ಕಾ/ಪಿ.ಆರ್/560 (ಬಿ) /11–12, ದಿನಾಂಕ:11–11–2011 ರಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ತುರ್ತಾಗಿ ನಿರ್ವಹಿಸ ಬೇಕಾಗಿರುವುದರಿಂದ ಟೆಂಡರ್ ಆಹ್ವಾನಿಸಿ ಕೈಗೊಳ್ಳುವಲ್ಲಿ ವಿಳಂಬವಾಗುವುದರಿಂದ, ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸಲು ಕೋರಿರುತ್ತಾರೆ. ಅದರಂತೆ, ಮಾನ್ಯ ಆಯುಕ್ತರು ಕಂಡಿಕೆ 27ರಲ್ಲಿ ರೂ.100.00 ಲಕ್ಷಗಳಿಗೆ ಮಿತಿಗೊಳಿಸಿ ಪ್ರಸ್ತಾವನೆಯನ್ನು ಸ್ಥಾಯಿ ಸಮಿತಿಗೆ ಮಂಡಿಸಿ ಸೂಕ್ತ ಆದೇಶವನ್ನು ಕೋರಲು ಆದೇಶಿಸಿರುತ್ತಾರೆ. ಅದರಂತೆ, ಈ ಕೆಳಕಂಡ 9 ಕಾಮಗಾರಿಗಳನ್ನು (ಅಂದಾಜು ಮೊತ್ತ ರೂ.90.02ಲಕ್ಷಗಳು) ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸಲು ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರ ದಿನಾಂಕ: 25–01–2012 ರ ಟಿಪ್ಪಣಿ.

| Sl. No. | Ward No. | Name of work | Job code No. | Est.Cost in Lakhs |
|---|---|---|---|---|
| 1. | 67 | Providing and construction of gallery surrounding area of play ground near Ambedkar School 2nd stage west of chord road in Ward No.67. | 067-11-000075 | 10.00 |
| 2. | 67 | Painting to chain link fencing and grills at pipeline park. Harekrishna Karumariyamma park and thaye Mahathaye park in Ward No.67. | 067-11-000105 | 11.00 |
| 3. | 67 | Development works pathway fencing and partition of Vishwesharaiah park in Ward No.67. | 067-11-000106 | 16.00 |
| 4. | 67 | Painting and other development works to udyakumar park in Ward No.67. | 067-11-000107 | 8.00 |
| 5. | 67 | Painting and pathway resetting and other works to Buddashanthi and siddroda park in Ward No.67. | 067-11-000109 | 5.00 |
| 6. | 67 | Painting and pathway resetting and other works to Ushe park in Ward No.67. | 067-11-000110 | 9.95 |
| 7. | 67 | Painting repairs and proving children equipment at Akka Mahadevi park in Ward No.67. | 067-11-000111 | 17.50 |
| 8. | 67 | Improvements to play ground at 1st N Block, Rajajinagara in Ward No.67. | 067-11-000113 | 5.00 |
| 9. | 67 | Providing brick on edge for trees surrounding at 1st N block, 1st R Block, 1st K block, 2nd stage, WOC road Nagapura in Ward No.67. | 067-11-000114 | 7.57 |
| | | | Total | **90.02** |

**ನಿರ್ಣಯ : – ದಿನಾಂಕ: 25–01–2012 ರ ವಿಶೇಷ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.**

ಮುಂದುವರೆದಿದೆ. . . . .

3. **ವಿಷಯ ಸಂಖ್ಯೆ:ತೋ/ಸ್ಥಾ/ಸ/44/ 11–12, ದಿನಾಂಕ: 30–01–2012**

ಉಪ ಮಹಾಪೌರರು ತಮ್ಮ ಪತ್ರ ಸಂಖ್ಯೆ:ಉ.ಮ.ಪೌ.ಅ.ಕಾ/ಪಿ.ಆರ್/560 (ಬಿ) /11–12, ದಿನಾಂಕ:11–11–2011 ರಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ತುರ್ತಾಗಿ ನಿರ್ವಹಿಸ ಬೇಕಾಗಿರುವುದರಿಂದ ಟೆಂಡರ್ ಆಹ್ವಾನಿಸಿ ಕೈಗೊಳ್ಳುವಲ್ಲಿ ವಿಳಂಬವಾಗುವುದರಿಂದ, ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸಲು ಕೋರಿರುತ್ತಾರೆ. ಅದರಂತೆ, ಮಾನ್ಯ ಆಯುಕ್ತರು ಕಂಡಿಕೆ (27)ರಲ್ಲಿ ರೂ.100.00 ಲಕ್ಷಗಳಿಗೆ ಮಿತಿಗೊಳಿಸಿ ಪ್ರಸ್ತಾವನೆಯನ್ನು ಸ್ಥಾಯಿ ಸಮಿತಿಗೆ ಮಂಡಿಸಿ ಸೂಕ್ತ ಆದೇಶವನ್ನು ಕೋರಲು ಆದೇಶಿಸಿರುತ್ತಾರೆ. ಅದರಂತೆ, ಈ ಕೆಳಕಂಡ 9 ಕಾಮಗಾರಿಗಳನ್ನು (ಅಂದಾಜು ಮೊತ್ತ ರೂ.89.86ಲಕ್ಷಗಳು) ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸಲು ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರ ದಿನಾಂಕ: 25–01–2012 ರ ಟಿಪ್ಪಣಿ.

| Sl. No. | Ward No. | Name of work | Job code No. | Est.Cost in Lakhs |
|---|---|---|---|---|
| 1. | 67 | Improvements to drains at 19th B main from 10th A cross to 10th C cross in N Block Rajajinagara in Ward No.67. | 067-11-000066 | 9.98 |
| 2. | 67 | Improvements to drains at 19th D main from 10th cross to 10th A cross in N Block Rajajinagara in Ward No.67. | 067-11-000068 | 9.98 |
| 3. | 67 | Improvements to drains at 19th G main from 10th cross to 10th A cross in N Block Rajajinagara in Ward No.67. | 067-11-000067 | 9.98 |
| 4. | 67 | Improvements to drains at 19th G main from 10th A cross to 10th C cross in N Block Rajajinagara in Ward No.67. | 067-11-000069 | 9.98 |
| 5. | 67 | Improvements to drains and footpath at 19th main (Balance works)(E/S) from 7th cross towards R Block Rajajinagara in Ward No.67. | 067-11-000070 | 9.98 |
| 6. | 67 | Improvements to drains and footpath at 19th main (Balance works)(W/S) from 7th cross towards R Block Rajajinagara in Ward No.67. | 067-11-000071 | 9.98 |
| 7. | 67 | Improvements to drains at 11th A cross from 12th main to 6th main 2nd stage West of Chord Road in Ward No.67. | 067-11-000072 | 9.98 |
| 8. | 67 | Construction of retaining wall at play ground (from 0.00 to 25.00 mtrs) near Ambedkar School 2nd stage West of Chord Road in Ward No.67. | 067-11-000073 | 10.00 |
| 9. | 67 | Construction of retaining wall at play ground (from 25.00 to 50.00 mtrs) near Ambedkar School 2nd stage West of Chord Road in Ward No.67. | 067-11-000074 | 10.00 |
| | | | Total | **89.86** |

**<u>ನಿರ್ಣಯ</u> : – ದಿನಾಂಕ: 25–01–2012 ರ ವಿಶೇಷ ಆಯುಕ್ತರ ಟಿಪ್ಪಣಿಯನ್ನು ಒಪ್ಪಿದೆ.**

**ಮುಂದುವರೆದಿದೆ. . . . .**

4. **<u>ವಿಷಯ ಸಂಖ್ಯೆ:ತೋ/ಸ್ಥಾ/ಸ/45/ 11-12, ದಿನಾಂಕ: 31-01-2012</u>**

*ಬಾಪೂಜಿ ನಗರ ವಾರ್ಡ್ ಸಂಖ್ಯೆ.134ರ ವ್ಯಾಪ್ತಿಯಲ್ಲಿ ಒಟ್ಟು 09 ಕಾಮಗಾರಿಗಳನ್ನು ತುರ್ತಾಗಿ ನಿರ್ವಹಿಸಬೇಕಾಗಿರುವುದರಿಂದ ಸದರಿ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ನೀಡಲು ಅನುಮತಿ ಕೋರುವ ಬಗ್ಗೆ.*

**<u>ನಿರ್ಣಯ</u> :-ಸ್ಥಳ ಪರಿಶೀಲನೆಗೆ ಮುಂದೂಡಲಾಗಿದೆ.**

5. **<u>ವಿಷಯ ಸಂಖ್ಯೆ:ತೋ/ಸ್ಥಾ/ಸ/47/ 11-12, ದಿನಾಂಕ: 02-02-2012</u>**

ವಾರ್ಡ್ ನಂ.90 ರಲ್ಲಿರುವ ಹಲಸೂರು ಕೆರೆಯ, ಕಾಲು ಸೇತುವೆ ನಿರ್ಮಾಣ ಹಾಗೂ ಕೆರೆಯ ದುರಸ್ಥಿ ಮಾಡುವ ಕಾಮಗಾರಿಗೆ ಮುಖ್ಯ ಅಭಿಯಂತರರು(ಪರಿಸರ ಕೋಶ-ಕೆರೆಗಳು)ರವರು ರೂ.129.25ಲಕ್ಷಗಳ ಅಂದಾಜುಪಟ್ಟಿಗೆ 2010-11ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ಕಾಮಗಾರಿ ಪ್ರಮಾಣ ಪತ್ರ ಸಂಖ್ಯೆ:090-12-000003 ಪಡೆದು, ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ ಹಾಗೂ ತೋಟಗಾರಿಕೆ ಸ್ಥಾಯಿ ಸಮಿತಿ ವಿಷಯ ಸಂಖ್ಯೆ:ತೋ/ತ/ಸ/12/11-12, ದಿನಾಂಕ:14-07-2011 ರಂದು ಟೆಂಡರ್ ಆಹ್ವಾನಿಸಲು ಅನುಮೋದಿಸಿರುತ್ತಾರೆ.

ಕಾರ್ಯಪಾಲಕ ಅಭಿಯಂತರರು-2, ಪರಿಸರ ಕೋಶ, ಕೆರೆಗಳು ರವರು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆದಿದ್ದು, ಸದರಿ ಟೆಂಡರ್‌ನಲ್ಲಿ ಒಬ್ಬರು ಗುತ್ತಿಗೆದಾರರು ಭಾಗವಹಿಸಿದ್ದ ಕಾರಣ, ಟೆಂಡರ್ ರದ್ದುಪಡಿಸಿ, ಮತ್ತೆ ಎರಡನೇಯ ಅಲ್ಪವಾದಿ ಕೆರೆಯಲ್ಲಿ ಇ_ಪ್ರೊಕ್ಯೂರ್‌ಮೆಂಟ್ ವಿಧಾನದ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿರುತ್ತಾರೆ. ಗುತ್ತಿಗೆದಾರರಿಂದ 02(ಎರಡು) ಟೆಂಡರ್‌ಗಳು ಸ್ವೀಕೃತವಾಗಿದ್ದು, 02(ಇಬ್ಬರು) ಟೆಂಡರ್‌ದಾರರು ತಾಂತ್ರಿಕ ಬಿಡ್‌ನಲ್ಲಿ ಸಿಂಧುವಾಗಿರುತ್ತಾರೆ. ಕಾರ್ಯಪಾಲಕ ಅಭಿಯಂತರರು-2, ಪರಿಸರ ಕೋಶ, ಕೆರೆಗಳು ರವರು ಕನಿಷ್ಟ ಟೆಂಡರ್‌ದಾರರಾದ ಶ್ರೀ.ಜೆ.ಸಿ.ಪ್ರಕಾಶ್, ಗುತ್ತಿಗೆದಾರರ ಟೆಂಡರ್‌ನ್ನು ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಮೊಬಲಗು ರೂ.1,11,52,503-83 ಗಳಾಗಿದ್ದು, ಈ ಕಾಮಗಾರಿಗೆ ಮಂಜೂರಾದ ದರಗಳಿಗೆ ಗುತ್ತಿಗೆದಾರರಾದ ಶ್ರೀ.ಜೆ.ಸಿ.ಪ್ರಕಾಶ್ ರವರು ಕನಿಷ್ಟ ದರಗಳನ್ನು ನಮೂದಿಸಿದ್ದು, ಇದರ ಮೊತ್ತ ರೂ.1,24,37,501-22 ಗಳಾಗಿದ್ದು, ಇದು ಮಂಜೂರಾದ ಅಂದಾಜು ಪಟ್ಟಿ ದರಗಳಿಗೆ(S.R. 2010-11)ಹೋಲಿಸಿದಾಗ ಶೇಕಡಾ + 11.52% ರಷ್ಟು ಹೆಚ್ಚು ಹಾಗೂ ನಮೂದಿತ ಮೊತ್ತವನ್ನು ದಿನಾಂಕ:01-10-2011 ರಿಂದ ಚಾಲನೆಯಲ್ಲಿರುವ S.R. 2010-11ನೇ ಸಾಲಿನ ದರಸೂಚಿಯನ್ವಯ ಹೋಲಿಸಿದಾಗ, ಶೇಕಡ +7.54% ಹೆಚ್ಚು ನಮೂದಿಸಿದ್ದು, ಕನಿಷ್ಟ ಟೆಂಡರ್‌ದಾರರಾಗಿರುತ್ತಾರೆ. ಮುಂದುವರೆದು, ಗುತ್ತಿಗೆದಾರರಾದ ಶ್ರೀ.ಜೆ.ಸಿ.ಪ್ರಕಾಶ್‌ರವರಿಗೆ ದಿನಾಂಕ: 25-11-2011 ರಂದು ದರ ಸಂದಾನಕ್ಕೆ ಕೋರಿದ್ದು, ಸದರಿ ಗುತ್ತಿಗೆದಾರರು ಶ್ರೀ.ಜೆ.ಸಿ.ಪ್ರಕಾಶ್‌ರವರು ದಿನಾಂಕ:29-11-2011 ರಂದು ಪತ್ರದ ಮೂಲಕ, ಅವರು ಟೆಂಡರ್‌ನಲ್ಲಿ ಸೂಚಿಸಿರುವ ದರವನ್ನು ಕಡಿಮೆ ಮಾಡಲು ಒಪ್ಪಿರುವುದಿಲ್ಲ. ಸದರಿ ಟೆಂಡರ್‌ನಲ್ಲಿ ನಮೂದಿಸಿದ ಟೆಂಡರ್ ದರವನ್ನು ಮಾನ್ಯ ಆಯುಕ್ತರು ಅನುಮೋದಿಸಿರುತ್ತಾರೆ.

**ಮುಂದುವರೆದಿದೆ. . . .**

ಮೇಲ್ಕಂಡ ಅಂಶಗಳನ್ನು ಗಮನಿಸಲಾಗಿ ಟೆಂಡರ್‌ನ ಒಟ್ಟು ಮೊತ್ತವು(ಟೆಂಡರ್ ಪ್ರೀಮಿಯಂ ಸೇರಿ) ರೂ.1,24,37,501–22ಗಳಾಗಿದ್ದು, ಸರ್ಕಾರದ ಆದೇಶದ ಸಂಖ್ಯೆ:ಯು.ಡಿ.ಡಿ./335/ಎಮ್.ಎನ್‌ವೈ/2007 (ಭಾ) ದಿನಾಂಕ:11–05–2009ರ ರೀತ್ಯಾ, ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ನಿಯಮಗಳು 1977 ನಿಯಮ 6 ಕ್ಕೆ ಆರ್ಥಿಕ ಅಧಿಕಾರಗಳ ತಿದ್ದುಪಡಿಯ ಬಾಕಿ ಇಟ್ಟು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಹೆಚ್ಚಿನ ಆರ್ಥಿಕ ಅಧಿಕಾರದ ಪ್ರತ್ಯಾಯೋಜನೆಯ ಶಿಫಾರಸ್ಸನ್ನು ಹಾಗೂ ಸರ್ಕಾರದ ಆದೇಶ ಸಂಖ್ಯೆ: ಯು.ಡಿ.ಡಿ./636/ಎಮ್.ಎನ್‌ವೈ/2010,ಬೆಂಗಳೂರು ದಿನಾಂಕ:02–04–2011ರ ರೀತ್ಯಾ ಕರ್ನಾಟಕ ಮುನಿಸಿಪಲ್

ಕಾರ್ಪೋರೇಷನ್ ಕಾಯ್ದೆ ನಿಯಮಗಳು 1977 ನಿಯಮ 6ಕ್ಕೆ ನೀಡಲಾದ ತಿದ್ದುಪಡಿಯನ್ನು ಸರ್ಕಾರವು ಅಂಗೀಕರಿಸಿದ್ದು, ಇದರಂತೆ ಟೆಂಡರ್ ಅಂಗೀಕರಿಸುವ ಪ್ರಾಧಿಕಾರವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ತೋಟಗಾರಿಕೆ ಸ್ಥಾಯಿ ಸಮಿತಿಯ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಟೆಂಡರ್ ಗುತ್ತಿಗೆದಾರರಾದ ಶ್ರೀ.ಜೆ.ಸಿ.ಪ್ರಕಾಶ್‌ರವರು 2010–11ನೇ ಸಾಲಿನ ದರಪಟ್ಟಿಯ ಮೇಲೆ ನಮೂದಿಸಿರುವ ದರಗಳಾದ ಶೇಕಡ +11.52% ರಷ್ಟು ಹೆಚ್ಚು ಹಾಗೂ ನಮೂದಿತ ಮೊತ್ತವನ್ನು ದಿನಾಂಕ:01–10–2011 ರಿಂದ ಚಾಲನೆಯಲ್ಲಿರುವ S.R. 2010–11ನೇ ಸಾಲಿನ ದರಸೂಚಿಯನ್ವಯ ಹೋಲಿಸಿದಾಗ ಶೇಕಡ +7.54% ಹೆಚ್ಚು ದರಗಳು ಅಥವಾ ರೂ.1,24,37,501–22 (ರೂಪಾಯಿ ಒಂದು ಕೋಟಿ ಇಪ್ಪತ್ತನಾಲ್ಕು ಲಕ್ಷದ ಮೂವತ್ತೇಳು ಸಾವಿರದ ಐದುನೂರ ಒಂದು ಮತ್ತು ಇಪ್ಪತ್ತೆರಡು ಪೈಸೆಗಳು ಮಾತ್ರ) ಗಳ ಟೆಂಡರ್‌ನ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ಆಯುಕ್ತರ ದಿನಾಂಕ: 19–01–2012 ರ ಟಿಪ್ಪಣಿ.

<u>ನಿರ್ಣಯ</u>: – **ದಿನಾಂಕ: 19–01–2012 ರ ವಿಶೇಷ ಆಯುಕ್ತರ ಟಿಪ್ಪಣಿಯನ್ನು ಒಪ್ಪುತ್ತಾ, ಟೆಂಡರ್ ದರಗಳನ್ನು ಸಮಿತಿಯು ಅನುಮೋದಿಸಿತು**

## 6. <u>ವಿಷಯ ಸಂಖ್ಯೆ:ತೋ/ಸ್ಥಾ/ಸ/49/ 11–12, ದಿನಾಂಕ: 09–02–2012</u>

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ಬೆಂಗಳೂರು ದಕ್ಷಿಣ ವಲಯ ವ್ಯಾಪ್ತಿಯಲ್ಲಿನ ದೀಪಾಂಜಲಿ ಕೆರೆಯ ಅಭಿವೃದ್ಧಿಯನ್ನು ಕೆರೆ ಅಭಿವೃದ್ಧಿ ಪ್ರಾಧಿಕಾರದ ನಿರ್ದೇಶನದಂತೆ ಕೈಗೆತ್ತಿ ಕೊಳ್ಳಲಾಗಿರುತ್ತದೆ. ಸದರಿ ಕೆರೆಯ ವಿವರವಾದ ಯೋಜನಾ ವರದಿಯನ್ನು (Detailed Project Report) ಮೆ॥ಸ್ಟೆಮ್ ಕನ್ಸಲ್‌ಟೆಂಟ್ ಪ್ರೈ.ಲಿ.(M/s.Stem Consulting Pvt.Ltd.)ರವರು ತಯಾರಿಸಿದ್ದು, ಅದರಂತೆ ಕೆರೆಯ ಸಮಗ್ರ ಅಭಿವೃದ್ಧಿಯ ಕಾಮಗಾರಿಯನ್ನು ಕೈಗೆತ್ತಿ ಕೊಳ್ಳಲಾಗಿರುತ್ತದೆ. ಅದರಲ್ಲಿ, ಪ್ರಥಮ ಹಂತದ ಕಾಮಗಾರಿಗಳನ್ನು ರೂ.94.53 ಲಕ್ಷಗಳ ಅಂದಾಜು ವೆಚ್ಚದಲ್ಲಿ ಹಾಗೂ ದ್ವಿತೀಯ ಹಂತದ ಕಾಮಗಾರಿಯನ್ನು ರೂ.153.39 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲಾಗಿದ್ದು, ಕಾಮಗಾರಿಗಳು ಪೂರ್ಣಗೊಂಡಿದ್ದು, ಮುಂಬರುವ ಮುಂಗಾರು ಋತುವಿನಲ್ಲಿ ನೀರನ್ನು ಸಂಗ್ರಹಿಸಬಹುದಾಗಿರುತ್ತದೆ.

**ಮುಂದುವರೆದಿದೆ. . . .**

ಕೆರೆಗೆ ಗೃಹೋಪಯೋಗಿ ಹಾಗೂ ಕೈಗಾರಿಕಾ ಸಿವೇಜ್ ಹರಿದು ಬರುತ್ತಿದ್ದು, ಹರಿದು ಬರುವ ಅಶುದ್ಧ ನೀರನ್ನು ಸಧ್ಯಕ್ಕೆ ಆರ್.ಸಿ.ಸಿ. ಕೊಳವೆಗಳ ಮುಖಾಂತರ ಎಲ್ಲಾ ಇನ್‌ಲೆಟ್‌ಗಳಿಂದ ಸಂಗ್ರಹಿಸಿ ಕೆರೆಯಿಂದ ಹೊರ ಹಾಕಲಾಗುತ್ತಿದೆ. ಯಾವುದೇ ಅಶುದ್ಧ ನೀರನ್ನು ಕೆರೆಯ ಒಳಭಾಗಕ್ಕೆ ಬಿಡಲಾಗುತ್ತಿಲ್ಲ. ಕೆರೆಯಲ್ಲಿನ ಸಿಲ್ಟ್‌ನ್ನು ತೆಗೆದು ಸಂಗ್ರಹಣಾ ಸಾಮರ್ಥ್ಯವನ್ನು ಹೆಚ್ಚಿಸಲಾಗಿರುತ್ತದೆ. ಸದರಿ ಕೆರೆಯಲ್ಲಿ ಬೇಸಿಗೆ ಕಾಲದಲ್ಲಿ ನೀರಿನ ಮಟ್ಟವನ್ನು ಕಾಪಾಡಲು ಅಶುದ್ಧ ನೀರನ್ನು ಸಂಸ್ಕರಿಸಿ ಶುದ್ಧೀಕೃತ ನೀರನ್ನು ಕೆರೆಗೆ ಬಿಡಬೇಕಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ದೀಪಾಂಜಲಿ ಕೆರೆಯಲ್ಲಿ ಕಲುಷಿತ ನೀರನ್ನು ಶುದ್ಧೀಕರಿಸುವ ಘಟಕವನ್ನು ಸ್ಥಾಪಿಸುವ ಅವಶ್ಯಕತೆ ಇರುತ್ತದೆ. ಈ ಮಧ್ಯೆ ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ಕಾಮಗಾರಿ ಗುಣ ನಿಯಂತ್ರಣ ಕಾರ್ಯಪಡೆ ರವರು, ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಆಯುಕ್ತರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ರವರಿಗೆ ಪತ್ರ ವಿಳಾಸಿಸುತ್ತಾ, ಬೆಂಗಳೂರು ನಗರದ ವ್ಯಾಪ್ತಿಯಲ್ಲಿರುವ ಬೃಹತ್ ಮಳೆನೀರು ಚರಂಡಿ ಹಾಗೂ ಕೆರೆಗಳಲ್ಲಿನ ಕಲುಷಿತ ಹಾಗೂ ದುರ್ವಾಸನೆಯುಕ್ತ ನೀರನ್ನು ಶುದ್ಧೀಕರಿಸುವ ಪ್ರಸ್ತಾವನೆಗೆ ಮುಂಬೈನ ಪ್ರತಿಷ್ಠಿತ IIT(Indian Institute of Technology) ಸಂಸ್ಥೆಯಿಂದ ಅವಿಷ್ಕರಿಸಲ್ಪಟ್ಟ *SBT(Soil Bio Technology) ಆಧಾರಿತ ಕಿರು ನೈರ್ಮಲೀಕರಣ ಘಟಕಗಳನ್ನು ಸೂಕ್ತ ಸ್ಥಳಗಳಲ್ಲಿ ಸ್ಥಾಪಿಸುವುದು ಇಂದಿನ ಅಗತ್ಯ ಹಾಗೂ ಅನಿವಾರ್ಯತೆಯಾಗಿದ್ದು, ಈ ನಿಟ್ಟಿನಲ್ಲಿ ಸಂಬಂಧಪಟ್ಟ ಪ್ರಾಧಿಕಾರಗಳು ಅಗತ್ಯ ಕ್ರಮ ಜರುಗಿಸುವ ಅವಶ್ಯಕತೆಯನ್ನು ಕಾಮಗಾರಿ ಗುಣನಿಯಂತ್ರಣ ಕಾರ್ಯಪಡೆಯಿಂದ ನಿರೀಕ್ಷಿಸಲಾಗಿದೆಯೆಂದು ತಿಳಿಸಿರುತ್ತಾರೆ.*

*ಮುಂದುವರೆದು, ಪ್ರಸ್ತಾವಿತ ವಿಕೇಂದ್ರೀಕೃತ ಕಿರು ನೈರ್ಮಲೀಕರಣ ಘಟಕವು (SBT) ಅತಿ ಕನಿಷ್ಠ ನಿರ್ವಹಣೆವುಳ್ಳ, ಕನಿಷ್ಟ ಅವಧಿಯಲ್ಲಿ ಶುದ್ಧೀಕರಣಗೊಳಿಸುವ ಸಾಮರ್ಥ್ಯವುಳ್ಳ ಮತ್ತು ಧೃಡವಾದ ವ್ಯವಸ್ಥೆಯಾಗಿದ್ದು, ಪರಿಸರ ಸ್ನೇಹಿಯಾಗಿರುತ್ತದೆ. ಅಲ್ಲದೇ, ಸದರಿ ಘಟಕವು ಶೇಕಡ 97% ರಷ್ಟು ಪ್ರಮಾಣದ ಶುದ್ಧೀಕೃತ ನೀರನ್ನು (ನದಿ ನೀರಿನ ಶುದ್ಧತೆಗೆ ಸಮಾನವಾಗಿದೆ) ಒದಗಿಸುವ ವಿಶೇಷತೆಯನ್ನು ಹೊಂದಿರುವುದನ್ನು ಈಗಾಗಲೇ ಪ್ರಾತ್ಯಕ್ಷಿಕೆ ಮೂಲಕ ಹಾಗೂ ಸ್ಥಳ ಪರಿವೀಕ್ಷಣೆ ಮೂಲಕ ಗಮನಿಸಲಾಗಿರುತ್ತದೆಯೆಂದು, ಅಗತ್ಯವೆನಿಸಿದಲ್ಲಿ ಸೋಂಕು ನಿವಾರಕ ರಾಸಾಯನಿಕ (Disinfectants) ಗಳನ್ನು ಬೆರೆಸಿ ಕುಡಿಯಲು ಯೋಗ್ಯವಾದ ನೀರನ್ನು ಸಹಿತ ಅತಿ ಕನಿಷ್ಠ ವೆಚ್ಚದಲ್ಲಿ ಪಡೆದುಕೊಳ್ಳ ಬಹುದಾಗಿದೆಯೆಂದು ಸಹ ತಿಳಿಸಿರುತ್ತಾರೆ.*

*ಈ ಹಿನ್ನೆಲೆಯಲ್ಲಿ ಪ್ರಸ್ತಾವಿತ ತಂತ್ರಜ್ಞಾನದ ಸ್ವಾಮ್ಯ ಹೊಂದಿರುವ ಡಾ॥ಅವಿನಾಶ್ ಎಂ ಕದಮ್, M/s.Sugama Paryavarna Vikalpa Private Limited, Mumbai ರವರು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಬೆಂಗಳೂರು ನಗರದಲ್ಲಿನ ಆಯ್ದ ಕೆರೆಗಳ ಸ್ಥಳ ಪರಿವೀಕ್ಷಣೆ ಮಾಡಿ ಕಾರ್ಯಪಡೆಗೆ Project Summaryಗಳನ್ನು ಸಲ್ಲಿಸಲಾಗಿದೆಯೆಂದು, ಅದರಂತೆ, ಬೃಹತ್ ಬೆಂಗಳೂರು ಮಹಾಗನರ*

**ಮುಂದುವರೆದಿದೆ. . . . .**

*ಪಾಲಿಕೆ ವ್ಯಾಪ್ತಿಯಲ್ಲಿರುವ ಕೆರೆಗಳನ್ನು ಶುದ್ಧೀಕರಿಸಲು ವಿಕೇಂದ್ರೀಕೃತ SBT ಗಳನ್ನು ಅಳವಡಿಸುವ ಈ ಯೋಜನೆ ಕುರಿತು ತುರ್ತಾಗಿ ಅಗತ್ಯ ಕ್ರಮ ಜರುಗಿಸುವಂತೆ ಕೋರಿರುತ್ತಾರೆ. ಇದರಲ್ಲಿ ದೀಪಾಂಜಲಿ ಕೆರೆಯು ಸಹ ಸೇರಿರುತ್ತದೆ.*

*ಈ ಹಿನ್ನೆಲೆಯಲ್ಲಿ M/s.Sugama Paryavarna Vikalpa Private Limited, Mumbai ರವರು ದೀಪಾಂಜಲಿ ಕೆರೆಗೆ ಭೇಟಿ ಕೊಟ್ಟು ಕೆರೆಯಲ್ಲಿ 0.3 ಎಂ.ಎಲ್.ಡಿ. ಸಾಮರ್ಥ್ಯದ ಕಲುಷಿತ ನೀರನ್ನು ಶುದ್ಧೀಕರಿಸಲು SBT(Soil Bio Technology) ಆಧಾರಿತ ತಂತ್ರಜ್ಞಾನದ ವಿಕೇಂದ್ರೀಕೃತ ಕಿರು ನೈರ್ಮಲೀಕರಣ ಘಟಕವನ್ನು ಸ್ಥಾಪಿಸಲು ಪ್ರಸ್ತಾವನೆಯನ್ನು ದಿನಾಂಕ:06–09–2011 ರಂದು ಪಾಲಿಕೆಗೆ ಸಲ್ಲಿಸಿರುತ್ತಾರೆ. ಪ್ರಸ್ತಾವನೆಯ ವಿವರ ಈ ಕೆಳಕಂಡಂತಿದೆ.*

## PROJECT COST SUMMARY

| Sl.No. | Description of the Estimate | Est.Cost in Rs. |
|---|---|---|
| 1. | Bio-reactor Tank | 54,51,000-00 |
| 2. | Wet well | 5,50,000-00 |
| 3. | Administrative block & Pump house | 3,00,000-00 |
| 4. | Jack well | 10,50,000-00 |
| 5. | Illumination arrangements for tank yard | 1,90,345-00 |
| 6. | Electrical works | 7,00,000-00 |
| | **Sub-Total** | **82,41,345-00** |
| 7. | Project management about 3% and rounding off | 2,58,655-00 |
| | **Total (A)** | **85,99,999-00** |
| 8. | **Operation and maintenance cost for 5 years Total (B)** | 34,81,000-00 |
| | **Grant Total (A+B)** | **1,19,81,000-00** |

**(Rupees One crores Nineteen lakhs Eight one thousand only)**

ಸದರಿ ಪ್ರಸ್ತಾವನೆಯನ್ನು ಮುಂಬೈನ ಪ್ರತಿಷ್ಠಿತ IIT(Indian Institute of Technology) ಸಂಸ್ಥೆಯಿಂದ ಅವಿಷ್ಕರಿಸಲ್ಪಟ್ಟ *SBT(Soil Bio Technology)* ಆಧಾರಿತ 0.3 ಎಂ.ಎಲ್.ಡಿ. ಸಾಮರ್ಥ್ಯದ ನೈರ್ಮಲೀಕರಣ ಘಟಕವನ್ನು ಸ್ಥಾಪಿಸಲು ಸಲ್ಲಿಸಲಾಗಿದ್ದು, ಸದರಿ *Technology* ಯು IIT ಮುಂಬೈನ IIT(Indian Institute of Technology) ಸಂಸ್ಥೆಯಿಂದ ಅವಿಷ್ಕರಿಸಲ್ಪಟ್ಟ ಹೊಸ ತಂತ್ರಜ್ಞಾನವಾಗಿದ್ದು, ಇದಕ್ಕೆ ಯು.ಎಸ್.ಎ.(U.S.A.) ಹಾಗೂ ಭಾರತ ದೇಶದ Patent ದೊರೆತಿದ್ದು, ಸದರಿ ತಂತ್ರಜ್ಞಾನದ ಆಧಾರದ ಮೇಲೆ ಈಗಾಗಲೇ ಬೃಹತ್ ಮುಂಬೈ ಮುನಿಸಿಪಲ್ ಕಾರ್ಪೋರೇಷನ್ ಬಾಂಬೆ ಇಲ್ಲಿ 3.0 ಎಂ.ಎಲ್.ಡಿ. ಸಾಮರ್ಥ್ಯದ Constructed Soil Filter(DSF) ಆಧಾರಿತ ಎಸ್.ಟಿ.ಪಿ.ಯನ್ನು ಅಳವಡಿಸಲಾಗಿದ್ದು, ಇದು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿದೆಯೆಂದು ವರದಿಸಲಾಗಿದೆ.

ಈ ಹಿನ್ನೆಲೆಯಲ್ಲಿ ದೀಪಾಂಜಲಿ ಕೆರೆಯಲ್ಲಿ 0.3 MLD ಸಾಮರ್ಥ್ಯದ ಕೊಳಚೆ ನೀರಿನ ಸಂಸ್ಕರಣಾ ಘಟಕವನ್ನು (*Soil Bio Technology*) ಸ್ಥಾಪಿಸಲು ಈ ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿ ಪ್ರಸ್ತಾವನೆಯನ್ನು ಮಂಡಿಸಿದೆ.

1. ರೂ.119.81 ಲಕ್ಷಗಳ ಅಂದಾಜು ವೆಚ್ಚದಲ್ಲಿ 0.3 MLD ಕೊಳಚೆ ನೀರಿನ ಸಂಸ್ಕರಣಾ ಘಟಕವನ್ನು (*Soil Bio Technology*) ದೀಪಾಂಜಲಿ ಕೆರೆಯಲ್ಲಿ ಸ್ಥಾಪಿಸಲು ಅನುಮೋದನೆ.
2. Turnkey ಮಾದರಿಯಲ್ಲಿ ಟೆಂಡರ್ ಕರೆಯಲು ಅನುಮೋದನೆ ಕೋರಿ ಕಡತವನ್ನು ಮಂಡಿಸಿದೆ.

ಮೇಲ್ಕಂಡ ಅಂಶಗಳಿಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:06–02–2012 ರ ಟಿಪ್ಪಣಿ.

ನಿರ್ಣಯ: – **ದಿನಾಂಕ: 06–02–2012 ರ ವಿಶೇಷ ಆಯುಕ್ತರ ಟಿಪ್ಪಣಿಯನ್ನು ಸಮಿತಿಯು ಅನುಮೋದಿಸಿದೆ.**

**7. ವಿಷಯ ಸಂಖ್ಯೆ:ತೋ/ಸ್ಥಾ/ಸ/50/ 11–12, ದಿನಾಂಕ: 09–02–2012**

*ವಾರ್ಡ್ ನಂ.35ರಲ್ಲಿರುವ ಸ್ಯಾಂಕಿಕೆರೆಯ ಅಂಗಳದಲ್ಲಿ ಇರುವ ಉದ್ಯಾನವನದಲ್ಲಿ RMZ Corp. ಸಂಸ್ಥೆಯವರು ಸಾರ್ವಜನಿಕರ ವ್ಯಾಯಾಮ ಉಪಕರಣಗಳನ್ನು ಅಳವಡಿಸಲು ಹಾಗೂ ಈ ಕೆರೆಯ ನಿರ್ವಹಣೆ ಮಾಡುವ ಬಗ್ಗೆ.*

**ನಿರ್ಣಯ :–ಸ್ಥಳ ಪರಿಶೀಲನೆಗೆ ಮುಂದೂಡಲಾಗಿದೆ.**

**8. ವಿಷಯ ಸಂಖ್ಯೆ:ತೋ/ಸ್ಥಾ/ಸ/53/ 11–12, ದಿನಾಂಕ: 14–02–2012**

ಉತ್ತರಹಳ್ಳಿ ಉಪ ವಿಭಾಗ ವ್ಯಾಪ್ತಿಗೆ ಬರುವ ಯಲಚೇನಹಳ್ಳಿ, ವಾರ್ಡ್ ಸಂಖ್ಯೆ.185 ರಲ್ಲಿ 2010–11ನೇ ಸಾಲಿನ ಪ್ರದೇಶಾಭಿವೃದ್ಧಿ ನಿಧಿಯ (ಶಾಸಕರ ಅನುದಾನ) ಯೋಜನೆಯಡಿಯಲ್ಲಿ Improvements to Annyyappa kere park in Ward No.185 (Yelachenahalli)

**ನಿರ್ಣಯ:– ಸ್ಥಳ ಪರಿಶೀಲನೆಗೆ ಮುಂದೂಡಲಾಗಿದೆ.**

**9. ವಿಷಯ ಸಂಖ್ಯೆ:ತೋ/ಸ್ಥಾ/ಸ/55/ 11–12, ದಿನಾಂಕ: 22–02–2012**

ಎಂಬಸ್ಸಿ ಗ್ರೂಪ್ ಸಂಸ್ಥೆಯವರು ದೊಮ್ಮಲೂರು ಮೇಲು ಸೇತುವೆ ಕೆಳಭಾಗದ ಪ್ರದೇಶದಲ್ಲಿ ಸುಮಾರು 2.50 ಕೋಟಿ ವೆಚ್ಚದಲ್ಲಿ ಉದ್ಯಾನವನವನ್ನು ಅಭಿವೃದ್ಧಿಗೊಳಿಸಲಾಗುವುದು ಹಾಗೂ ಇದನ್ನು ಪ್ರತಿ ವರ್ಷ ವೆಚ್ಚ ರೂ.15.00 ಲಕ್ಷಗಳನ್ನು ನಿರ್ವಹಣೆಗೋಸ್ಕರ ವೆಚ್ಚ ಮಾಡುತ್ತಾರೆಂದು ಮುಂದೆ ಬಂದಿರುತ್ತಾರೆ. ಇದರಿಂದ ಈ ಪ್ರದೇಶ ಸುಂದರಗೊಳಿಸಲಾಗುತ್ತದೆ.

ಅದರ ಸುತ್ತಮುತ್ತ ಜಾಹೀರಾತುಗಳನ್ನು ಹಾಕಲು ಅವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅನುಮತಿ ಪಡೆಯಬೇಕಾಗಿರುತ್ತದೆ. ಸದರಿಯವರು ತಮ್ಮ ಪತ್ರದಲ್ಲಿ 4 ಹೋಲ್ಡಿಂಗ್ಸ್‌ಗಳನ್ನು ಹಾಕಲು ಅನುಮತಿ ಕೋರಿದ್ದು, ಅದರಲ್ಲಿ ಬರತಕ್ಕ ಶೇ.30ರಷ್ಟು ಭಾಗವನ್ನು ಬೃಹತ್ ಬೆಂಗಳೂರು

ಮಹಾನಗರ ಪಾಲಿಕೆಗೆ ನೀಡಲು ಒಪ್ಪಿರುತ್ತಾರೆ ಹಾಗೂ ಈ ಒಂದು ದೊಮ್ಮಲೂರು ಮೇಲು ಸೇತುವೆ ಕೆಳಭಾಗದ ಪ್ರದೇಶದಲ್ಲಿ ಅಭಿವೃದ್ಧಿಗೊಳಿಸುವ ಉದ್ಯಾನವನವನ್ನು 15 ವರ್ಷಗಳ ಕಾಲ ನಿರ್ವಹಣೆ ಮಾಡಲು ಅನುಮತಿ ಸಹ ಕೋರಿರುತ್ತಾರೆ. ಈ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ : 15-02-2012 ರ ಟಿಪ್ಪಣಿ.

**<u>ನಿರ್ಣಯ:</u> – ದಿನಾಂಕ: 15-02-2012 ರ ವಿಶೇಷ ಆಯುಕ್ತರ ಟಿಪ್ಪಣಿಯನ್ನು ಒಪ್ಪುತ್ತಾ, ವಿಷಯವನ್ನು ಕೌನ್ಸಿಲ್ ಸಭೆಯ ಮುಂದೆ ತರಲು ಒಪ್ಪಲಾಯಿತು.**

10. **<u>ವಿಷಯ ಸಂಖ್ಯೆ:ತೋ/ಸ್ಥಾ/ಸ/56/ 11-12, ದಿನಾಂಕ: 22-02-2012</u>**

ಬೆಂಗಳೂರು ಮಹಾನಗರ ಪಾಲಿಕೆಯ, ಮಹದೇವಪುರ ವಲಯದ ಮುನ್ನೇಕೊಳಲು ಕೆರೆಯ ಒಟ್ಟು ವಿಸ್ತೀರ್ಣ 15 ಎಕರೆ 38 ಗುಂಟೆಗಳಾಗಿದ್ದು, ಬೆಂಗಳೂರು ನಗರ ಜಿಲ್ಲೆಯಲ್ಲಿ ಕುಡಿಯುವ ನೀರಿನ ಕೊರತೆಯನ್ನು ಹೋಗಲಾಡಿಸಲು ಮೊದಲನೆ ಹಂತದಲ್ಲಿ ಮುನ್ನೇಕೊಳಲು ಕೆರೆಯಲ್ಲಿ ಮಳೆ ನೀರು ಸಂಗ್ರಹಣೆ ಮಾಡುವ ಸಲುವಾಗಿ ಸದರಿ ಕೆರೆಯನ್ನು ಸಮಗ್ರ ಅಭಿವೃದ್ಧಿಪಡಿಸುವ ಸಲುವಾಗಿ ಸದರಿ ಕೆರೆಯಲ್ಲಿ ಅನಧಿಕೃತ ಒತ್ತುವರಿಯನ್ನು ತಡೆಯಲು ಕೆರೆಯ ಗಡಿಗೆ ತಂತಿಬೇಲಿ ಅಳವಡಿಸುವ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಸಾರ್ವಜನಿಕರು ಕೆರೆಯನ್ನು ಉಪಯೋಗಿಸಲು ಅನುಕೂಲವಾಗುವಂತೆ ಅಭಿವೃದ್ಧಿಪಡಿಸುವ ಉದ್ದೇಶದಿಂದ ಹಾಗೂ ಕೆರೆಗೆ ಕೊಳಚೆ ನೀರು ಮತ್ತು ತ್ಯಾಜ್ಯ ಸೇರುವುದನ್ನು ತಡೆಯಬೇಕಾಗಿರುತ್ತದೆ. ಸದರಿ ಕೆರೆಯಲ್ಲಿ ಈ ವರ್ಷದ ಮಳೆಗಾಲದಲ್ಲಿ ಮಳೆ ನೀರು ಸಂಗ್ರಹಿಸಲು ಮತ್ತು ಸಾರ್ವಜನಿಕರು ಕೆರೆಯನ್ನು ಉಪಯೋಗಿಸಲು ಅನುಕೂಲವಾಗುವಂತೆ ಅಭಿವೃದ್ಧಿಗೊಳಿಸಲು ಯೋಜನಾ ವರದಿಯನ್ನು M/S. Ides Consulting Pvt. Ltd. ತಯಾರಿಸುವಂತೆ ನೇಮಿಸಲಾಗಿದ್ದು, ಸದರಿ ವರದಿಯಲ್ಲಿ ಕೆರೆಯ ಒಳ ಹರಿವು ಪ್ರಮಾಣ, ಸಂಗ್ರಹಣೆ ಮೇಲಿನ ರಾಜಕಾಲುವೆಗಳ ದುರಸ್ಥಿ, ಹೂಳಿನ ಆಳ ಮತ್ತು ಪ್ರಮಾಣ ಹಾಗೂ ಕೋಡಿ ದುರಸ್ಥಿ ಮುಂತಾದ ಅಂಶಗಳ ಬಗ್ಗೆ ಸಮಗ್ರ ವರದಿಯನ್ನು ಸಲ್ಲಿಸಿರುತ್ತಾರೆ.

ಅದರಂತೆ, ಸಮಗ್ರ ಯೋಜನಾ ವರದಿಯ ಅಂದಾಜು ಮೊತ್ತ ರೂ.250.00 ಲಕ್ಷಗಳಾಗಿದ್ದು, ಸದರಿ ಕೆಲಸವನ್ನು ಅನುಮೋದಿಸಲು ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:15-02-2012 ರ ಟಿಪ್ಪಣಿ.

**<u>ನಿರ್ಣಯ:-</u>ದಿನಾಂಕ:15-02-2012 ರ ವಿಶೇಷ ಆಯುಕ್ತರ ಟಿಪ್ಪಣಿಯನ್ನು ಅನುಮೋದಿಸಲಾಯಿತು.**

11. **<u>ವಿಷಯ ಸಂಖ್ಯೆ:ತೋ/ಸ್ಥಾ/ಸ/57/ 11-12, ದಿನಾಂಕ: 22-02-2012</u>**

ವಾರ್ಡ್ ನಂ.12 ಮತ್ತು 14ರಲ್ಲಿ ಅಭಿವೃದ್ಧಿಗೊಳಿಸಬೇಕಾಗಿರುವ ಮೂರು ಕಾಮಗಾರಿಗಳ ವಿವರಗಳನ್ನು ಈ ಕೆಳಕಂಡಂತೆ ಕಾಮಗಾರಿಗಳ ಅಂದಾಜುಪಟ್ಟಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಯಾಗಿದ್ದು, ಸದರಿ ಕಾಮಗಾರಿಗಳು ಜರೂರು ಸ್ವರೂಪದ್ದಾಗಿರುತ್ತದೆ ಹಾಗೂ ಸಾರ್ವಜನಿಕ ಕೆಲಸ ಕಾರ್ಯಗಳ ಹಿತದೃಷ್ಠಿಯಿಂದ ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮುಖೇನ ಕೈಗೆತ್ತಿಕೊಂಡು ಜರೂರಾಗಿ ನಿರ್ವಹಿಸುವಂತೆ ಪೂಜ್ಯ ಮಹಾಪೌರರು ದಿನಾಂಕ:01-08-2011ರ ಪತ್ರದಲ್ಲಿ

ಆದೇಶ ನೀಡಿರುತ್ತಾರೆ. ಸದರಿ ಪ್ರಸ್ತಾವನೆಗೆ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:16–02–2012 ರ ಟಿಪ್ಪಣಿ.

| Sl. No. | Ward No. | Name of the work | Amount in Laksh |
|---|---|---|---|
| 1. | 14-Bagalgunte | Chain link fencing and othere development works at Soundrya Layout Sahyadri Balaga, HT line Park | 20.00 |
| 2. | 12-Shettyhalli | Developmnt works in Park at Abbigere Main road Hospital | 40.00 |
| 3. | 12-Shettyhalli | Park Development works at Anjenya Swamy Temple Park Shettyhalli | 19.00 |

**<u>ನಿರ್ಣಯ:</u> – ದಿನಾಂಕ: 16–02–2012 ರ ವಿಶೇಷ ಆಯುಕ್ತರು(ಯೋಜನೆ)ರವರ ಟಿಪ್ಪಣಿಯನ್ನು ಒಪ್ಪಿದೆ.**

12. <u>ವಿಷಯ ಸಂಖ್ಯೆ:ತೋ/ಸ್ಥಾ/ಸ/58/ 11–12, ದಿನಾಂಕ: 22–02–2012</u>

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ಬೊಮ್ಮನಹಳ್ಳಿ ವಲಯ ವ್ಯಾಪ್ತಿಯಲ್ಲಿನ ದೊರೆಕೆರೆಯ ಅಭಿವೃದ್ಧಿಯನ್ನು ಕೈಗೊಳ್ಳಲು ವಿವರವಾದ ಯೋಜನಾ ವರದಿಯನ್ನು (detailed Project Report) ಮೆ॥ ದಿ ಡಿಸೈನರ್ಸ್‌ರವರು ತಯಾರಿಸಿದ್ದು, ಅದರಂತೆ ಕೆರೆಯ ಸಮಗ್ರ ಅಭಿವೃದ್ಧಿ ಕಾಮಗಾರಿಯನ್ನು ವಿವಿಧ ಹಂತಗಳಲ್ಲಿ ಕೈಗೆತ್ತಿಕೊಂಡು ನಿರ್ವಹಿಸಲಾಗುತ್ತಿದ್ದು, ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿವೆ. ಹಾಗಾಗಿ ಮುಂಬರುವ ಮುಂಗಾರು ಋತುವಿನಲ್ಲಿ ಕೆರೆಯಲ್ಲಿ ನೀರನ್ನು ಸಂಗ್ರಹಿಸಬಹುದಾಗಿರುತ್ತದೆ.

ಆದರೆ, ಇತ್ತೀಚಿನ ದಿನಗಳಲ್ಲಿ ದೊರೆಕೆರೆಯ ಎರಡನೇ ಒಳಹರಿವು ಕಾಲುವೆಯ(Inlet-2) ಅಕ್ಕಪಕ್ಕದ ಬಡಾವಣೆಗಳು ಅಭಿವೃದ್ಧಿಗೊಂಡು ಕೆರೆಗೆ ಕೊಳಚೆ ನೀರಿನ ಒಳಹರಿವು ಪ್ರಮಾಣವು ಅಧಿಕವಾಗಿರುತ್ತದೆ. ಈ ಒಳಹರಿವು ಕಾಲುವೆಯು ಕೆರೆಯ ಕೋಡಿಯ ಮಟ್ಟಕ್ಕೆ ಹಾಗೂ ಮುಖ್ಯ ಒಳಹರಿವು ಕಾಲುವೆಯ (Inlet-1) ಮಟ್ಟಕ್ಕೆ ಸಮನಾಗಿರುವುದರಿಂದ, ಈ ಕೊಳಚೆ ನೀರನ್ನು ಮುಖ್ಯ ಒಳಹರಿವು ಕಾಲುವೆಗೆ ಸೇರಿಸಲು ಸಾಧ್ಯವಾಗುವುದಿಲ್ಲವಾದ ಕಾರಣ, ಈ ಎರಡನೇ ಒಳಹರಿವು ಕಾಲುವೆಗೆ ಪ್ರತ್ಯೇಕ ಸಿಲ್ಟ್ ಟ್ರಾಪ್ ನಿರ್ಮಾಣ ಮಾಡಿ 450 ಮಿ.ಮೀ. ಕೊಳವೆ ಮಾರ್ಗದ ಮೂಲಕ ಕೊಳಚೆ ನೀರನ್ನು ಕೆರೆ ಕೋಡಿಯ ಹೊರಗೆ ಸಾಗಿಸುವುದು ಸೂಕ್ತವಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ದೊರೆಕೆರೆಯ ಎರಡನೇ ಒಳಹರಿವು ಕಾಲುವೆಗೆ (Inlet-2) ಸಿಲ್ಟ್ ಟ್ರಾಪ್ ನಿರ್ಮಾಣ ಹಾಗೂ ಕೊಳವೆ ಮಾರ್ಗದ ನಿರ್ಮಾಣ ಕಾಮಗಾರಿಯ ಅಂದಾಜು ಮೊತ್ತ ರೂ.51.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ

ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:16–02–2012 ರ ಟಿಪ್ಪಣಿ.

<u>ನಿರ್ಣಯ:</u> – **ದಿನಾಂಕ: 16–02–2012 ರ ವಿಶೇಷ ಆಯುಕ್ತರ ಟಿಪ್ಪಣಿ ಅನುಮೋದಿಸುತ್ತಾ, ಸದರಿ ಕಾಮಗಾರಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲು ಸಮಿತಿಯು ಒಪ್ಪಿತು.**

13. <u>ವಿಷಯ ಸಂಖ್ಯೆ:ತೋ/ಸ್ಥಾ/ಸ/59/ 11–12, ದಿನಾಂಕ: 25–02–2012</u>

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ರಾಜರಾಜೇಶ್ವರಿನಗರ ವಲಯದ, ವಾರ್ಡ್ ಸಂಖ್ಯೆ.160ರ ವ್ಯಾಪ್ತಿಯ, ಐಡಿಯಲ್ ಹೋಮ್ಸ್ 2ನೇ ಹಂತದ ಉದ್ಯಾನವನಕ್ಕಾಗಿ ಮೀಸಲಿಟ್ಟಿರುವ ಸ್ಥಳದಲ್ಲಿ ಸಾರ್ವಜನಿಕರ ಹಿತದೃಷ್ಠಿಯಿಂದ, ಈ ಪ್ರದೇಶದಲ್ಲಿ ವಾಸಿಸುವ ನಾಗರೀಕರಿಗೆ ಅನುಕೂಲ ಕಲ್ಪಿಸಲು ಉದ್ಯಾನವನಕ್ಕಾಗಿ ಮೀಸಲಿಟ್ಟಿರುವ ಜಾಗದ ಸುತ್ತಲೂ ತಂತಿಬೇಲಿ, ನಡೆದಾರಿ, ಕೊಳವೆ ಬಾವಿ, ಕಾವಲುಗಾರನ ಕೊಠಡಿ ಹಾಗೂ ವೃಕ್ಷವನ ನಿರ್ಮಿಸಲು ಶ್ರೀ.ಜಿ.ಹೆಚ್.ರಾಮಚಂದ್ರ, ಮಾನ್ಯ ಅಧ್ಯಕ್ಷರು, ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿರವರು ದಿನಂಕ:29–06–2011ರ ಪತ್ರದಲ್ಲಿ ಕೋರಿರುತ್ತಾರೆ.

ದಿನಾಂಕ:09–09–2011ರ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಮಿತಿ ಸಭೆ ವಿಷಯ ಸಂಖ್ಯೆ.ತೆಆಸ್ಥಾಸ/200/2011–12 ರಲ್ಲಿ ಸದರಿ ಕಾಮಗಾರಿಯನ್ನು 2011–12ನೇ ಸಾಲಿನ ಆಯವ್ಯಯದ ತೋಟಗಾರಿಕೆ ಮತ್ತು ಪರಿಸರ ನಿರ್ವಹಣೆ ಅಡಿಯಲ್ಲಿ ಬರುವ **"ವೃಕ್ಷವನಗಳು ಪಿ1850"** ಲೆಕ್ಕಶೀರ್ಷಿಕೆ ಅಡಿಯಲ್ಲಿ ಕೈಗೊಳ್ಳಲು ಮಂಜೂರಾತಿ ನೀಡಿರುತ್ತಾರೆ.

ಆದ್ದರಿಂದ, ಸದರಿ 2 ಕಾಮಗಾರಿಗಳಾದ 1) ವಾರ್ಡ್ ನಂ.160 ವ್ಯಾಪ್ತಿಯ ಐಡಿಯಲ್ ಹೋಮ್ಸ್ 2ನೇ ಹಂತದ ಉದ್ಯಾನವನ ತಂತಿಬೇಲಿ ಮತ್ತು ಇತರೆ ಅಭಿವೃದ್ಧಿ, **ಅಂದಾಜು ರೂ.43.95 ಲಕ್ಷಗಳು** ಮತ್ತು 2) ವಾರ್ಡ್ ನಂ.160 ವ್ಯಾಪ್ತಿಯ ಐಡಿಯಲ್ ಹೋಮ್ಸ್ 2ನೇ ಹಂತದ ಉದ್ಯಾನವನದ ಭೂಮಿ ಮಟ್ಟ ಮಾಡುವುದು, ನಡೆದಾರಿ ಮತ್ತು ಇತರೆ ಅಭಿವೃದ್ಧಿ, **ಅಂದಾಜು ರೂ.30.15** ಲಕ್ಷಗಳು ಒಟ್ಟಾರೆ ಅಂದಾಜು ಮೊತ್ತ **ರೂ.74.10** ಲಕ್ಷಗಳಿಗೆ 2011–12ನೇ ಸಾಲಿನ ಆಯವ್ಯಯದ ತೋಟಗಾರಿಕೆ ಮತ್ತು ಪರಿಸರ ನಿರ್ವಹಣೆ ಅಡಿಯಲ್ಲಿ ಬರುವ **"ವೃಕ್ಷವನಗಳು ಪಿ1850"** ಲೆಕ್ಕಶೀರ್ಷಿಕೆ ಅಡಿಯಲ್ಲಿ ಕೈಗೊಳ್ಳಲು ಅನುಮೋದನೆ ನೀಡಲು ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:23–02–2012 ರ ಟಿಪ್ಪಣಿ.

<u>ನಿರ್ಣಯ:</u> – **ದಿನಾಂಕ: 23–02–2012 ರ ವಿಶೇಷ ಆಯುಕ್ತರ ಟಿಪ್ಪಣಿಯನ್ನು ಒಪ್ಪುತ್ತಾ, ಸದರಿ ಕಾಮಗಾರಿಯನ್ನು ಕೈಗೊಳ್ಳಲು ಸಮಿತಿಯು ತೀರ್ಮಾನಿಸಿತು.**

**ಮುಂದುವರೆದಿದೆ. . .**

**14. <u>ವಿಷಯ ಸಂಖ್ಯೆ:ತೋ/ಸ್ಥಾ/ಸ/60/ 11–12, ದಿನಾಂಕ: 25–02–2012</u>**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ರಾಜರಾಜೇಶ್ವರಿನಗರ ವಲಯದ, ವಾರ್ಡ್ ಸಂಖ್ಯೆ.160ರ ವ್ಯಾಪ್ತಿಯ, 10 ಉದ್ಯಾನವನಗಳಲ್ಲಿ ಶೌಚಾಲಯ ವ್ಯವಸ್ಥೆ ಕಲ್ಪಿಸಲು ಶ್ರೀ.ಜಿ.ಹೆಚ್.ರಾಮಚಂದ್ರ, ಮಾನ್ಯ ಅಧ್ಯಕ್ಷರು, ಬೃಹತ್ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿರವರು ದಿನಂಕ:09–05–2011ರ ಪತ್ರದಲ್ಲಿ, ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯ ಉದ್ಯಾನವನಗಳಲ್ಲಿ ಮುಂಜಾನೆ ಮತ್ತು ಸಂಜೆ ವಾಯು ವಿಹಾರಕ್ಕೆ ಬರುವ ಸಾರ್ವಜನಿಕರು, ವಯೋವೃದ್ಧರು ಮತ್ತು ಮಕ್ಕಳಿಗೆ ಶೌಚಾಲಯ ವ್ಯವಸ್ಥೆ ಕಲ್ಪಿಸಲು ಕೋರಿರುತ್ತಾರೆ.

ದಿನಾಂಕ:01–08–2011ರ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಸಭೆ ವಿಷಯ ಸಂಖ್ಯೆ.ತೆಆಸ್ಥಾಸ/150/2011–12ರಲ್ಲಿ, ಸದರಿ ಕಾಮಗಾರಿಯನ್ನು 2011–12ನೇ ಸಾಲಿನ ಆಯವ್ಯಯದ ತೋಟಗಾರಿಕೆ ಮತ್ತು ಪರಿಸರ ನಿರ್ವಹಣೆ ಅಡಿಯಲ್ಲಿ ಬರುವ **"ಉದ್ಯಾನವನಗಳಿಗೆ ದೀಪಗಳು ಮತ್ತು ಶೌಚಾಲಯ ವ್ಯವಸ್ಥೆ ಪಿ0973"** ಲೆಕ್ಕಶೀರ್ಷಿಕೆ ಅಡಿಯಲ್ಲಿ ಕೈಗೊಳ್ಳಲು ಮಂಜೂರಾತಿ ನೀಡಿರುತ್ತಾರೆ

ಆದ್ದರಿಂದ ಸದರಿ ಒಟ್ಟು 10 ಕಾಮಗಾರಿಗಳ ಅಂದಾಜು ಮೊತ್ತ ರೂ.75.00 ಲಕ್ಷಗಳನ್ನು 2011–12ನೇ ಸಾಲಿನ ಆಯವ್ಯಯದ ತೋಟಗಾರಿಕೆ ಮತ್ತು ಪರಿಸರ ನಿರ್ವಹಣೆ ಅಡಿಯಲ್ಲಿ ಬರುವ **"ಉದ್ಯಾನವನಗಳಿಗೆ ದೀಪಗಳು ಮತ್ತು ಶೌಚಾಲಯ ವ್ಯವಸ್ಥೆ ಪಿ0973"** ಲೆಕ್ಕಶೀರ್ಷಿಕೆ ಅಡಿಯಲ್ಲಿ ಕೈಗೊಳ್ಳಲು ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:08–02–2012 ರ ಟಿಪ್ಪಣಿ.

<u>ನಿರ್ಣಯ</u>: – **ದಿನಾಂಕ: 08–02–2012 ರ ವಿಶೇಷ ಆಯುಕ್ತರ ಟಿಪ್ಪಣಿಯಂತೆ ಸದರಿ ಕಾಮಗಾರಿಯನ್ನು ಕೈಗೊಳ್ಳಲು ಸಮಿತಿಯು ತೀರ್ಮಾನಿಸಿತು.**

**15. <u>ವಿಷಯ ಸಂಖ್ಯೆ:ತೋ/ಸ್ಥಾ/ಸ/61/ 11–12, ದಿನಾಂಕ: 05–03–2012</u>**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ, ಬೆಂಗಳೂರು ದಕ್ಷಿಣ ವಲಯದ ದೀಪಾಂಜಲಿ ಕೆರೆಯನ್ನು ಅಭಿವೃದ್ಧಿಪಡಿಸಲು ಸರ್ಕಾರದ ಆದೇಶ ಸಂಖ್ಯೆ:ಅಪಜೀ 348 ಇಸಿಓ 2006, ಬೆಂಗಳೂರು, ದಿನಾಂಕ:30–04–2008 ರಂತೆ ಪಾಲಿಕೆಗೆ ಹಸ್ತಾಂತರಿಸಲಾಗಿರುತ್ತದೆ ಹಾಗೂ ಸದರಿ ಕೆರೆಯ ಅಭಿವೃದ್ಧಿ ಕಾರ್ಯದ ಯೋಜನಾ ವರದಿಯನ್ನು ತಯಾರಿಸಿ ಸರ್ಕಾರದ ಆದೇಶದಂತೆ **"ಕೆರೆ ಅಭಿವೃದ್ಧಿ ಪ್ರಾಧಿಕಾರ"** ರವರಿಂದ, ಸದರಿ ಕೆರೆಯ ಯೋಜನಾ ವರದಿಯ ಮೊತ್ತ ರೂ.336.95 ಲಕ್ಷಗಳಿಗೆ ಅನುಮೋದನೆಯನ್ನು ಪಡೆಯಲಾಗಿರುತ್ತದೆ ಹಾಗೂ ಸದರಿ ಕೆರೆಯ ಸಮಗ್ರ ಅಭಿವೃದ್ಧಿ ಅಂದಾಜು ಮೊತ್ತ ರೂ.336.95 ಲಕ್ಷಗಳಿಗೆ ಮಾನ್ಯ ಆಡಳಿತಾಧಿಕಾರಿಯವರ ನಡವಳಿಗಳು, ದಿನಾಂಕ:11–07–2008 ರಂದು ವಿಷಯ ಸಂಖ್ಯೆ:311/2008–09 ರಲ್ಲಿ ರೂ.336.95 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ದೊರಕಿರುತ್ತದೆ.

ದೀಪಾಂಜಲಿ ಕೆರೆಯ ಅಭಿವೃದ್ಧಿಗೆ 2011–12ನೇ ಸಾಲಿನ ಪಾಲಿಕೆಯ ಬಜೆಟ್‌ನಲ್ಲಿ ಲೆಕ್ಕಶೀರ್ಷಿಕೆ "***12 ನಗರ ವ್ಯಾಪ್ತಿ ಅರಣ್ಯೀಕರಣ ಮತ್ತು ಪರಿಸರ ನಿರ್ವಹಣೆ***'ಯಲ್ಲಿನ ಉಪ ಶೀರ್ಷಿಕೆ **"ಕೆರೆಗಳ ನಿರ್ವಹಣೆ" ಪಿ2097** ರಡಿಯಲ್ಲಿ ರೂ.400.00 ಲಕ್ಷಗಳನ್ನು ಮೀಸಲಿರಿಸಿದ್ದು, ಪ್ರಥಮ ಹಂತದಲ್ಲಿ

ರೂ.94.50 ಲಕ್ಷಗಳಿಗೆ ಮತ್ತು ದ್ವಿತೀಯ ಹಂತದಲ್ಲಿ ರೂ.175.00 ಲಕ್ಷಗಳಿಗೆ ಈ ಕೆಳಕಂಡ ಕೆರೆ ಅಭಿವೃದ್ಧಿ ಕಾಮಗಾರಿಗಳಿಗೆ ಅನುವು ಮಾಡಲಾಗಿದೆ.

**ಹಂತ–1**

1. ಕೆರೆಯಲ್ಲಿ ಬೆಳೆದಿರುವ ಗಿಡಗುಂಟೆಗಳನ್ನು ತೆರವುಗೊಳಿಸುವುದು ಮತ್ತು ನೀರನ್ನು ಹೊರ ತೆಗೆಯುವುದು.
2. ಕೆರೆಯ ಹೂಳನ್ನು ತೆಗೆದು ನೀರಿನ ಸಂಗ್ರಹ ಸಾಮರ್ಥ್ಯವನ್ನು ಹೆಚ್ಚಿಸುವುದು
3. ಕೆರೆಯ ಏರಿಯನ್ನು ಬಲಪಡಿಸುವುದು.
4. ಕೆರೆಯ ಸುತ್ತಲೂ ಅಂಗಳದಲ್ಲಿ ಪಾದಚಾರಿ ಮಾರ್ಗವನ್ನು ನಿರ್ಮಿಸುವುದು.
5. ಸಿಲ್ಟ್ ಟ್ರಾಫ್ ನಿರ್ಮಾಣ ಮತ್ತು ಡ್ರೈ ವೇದರ್ ಫ್ಲೋ ನೀರು ಹರಿಯಲು ಆರ್.ಸಿ.ಸಿ ಎನ್.ಪಿ3 600 ಎಂ.ಎಂ.ಡಯಾ ಪೈಪ್‌ನ ಮೂಲಕ ಕೆರೆಯ ಹೊರ ಕಳುಹಿಸುವುದು ಹಾಗೂ ಛೇಂಬರ್‌ಗಳ ನಿರ್ಮಾಣ.
6. ರಿವಿಂಟ್‌ಮೆಂಟ್ ಹಾಕುವ ಕಾಮಗಾರಿ ಹಾಗೂ ಇತ್ಯಾದಿ ಕಾಮಗಾರಿಗಳು.

**ಹಂತ–2**

1. ಆರ್.ಸಿ.ಸಿ. ಕಾಂಪೌಂಡ್ ಗೋಡೆ ನಿರ್ಮಾಣ ಮತ್ತು ಆರ್.ಸಿ.ಸಿ. ಡ್ರೈವ್ ನಿರ್ಮಾಣ.
2. ಇನ್‌ಲೇಟ್‌ಗಳ ಮುಖಾಂತರ ಕೆರೆಗೆ ಬರುವ ಕೊಳಚೆ ನೀರನ್ನು ಕೊಂಡ್ಯೊಯಲು ಎಸ್.ಡಬ್ಲ್ಯೂ.ಡಿ. ನಿರ್ಮಾಣ.
3. ಚೈನ್ ಲಿಂಕ್ ತಂತಿ ಬೇಲಿ ಅಳವಡಿಸುವ ಕಾಮಗಾರಿ.
4. ಕೆರೆಯ ಕೋಡಿ ಅಭಿವೃದ್ಧಿ ಹಾಗೂ ಅದರ ಮೇಲೆ ಕಾಲು ಸೇತುವೆ ನಿರ್ಮಾಣ.
5. ಸಿಲ್ಟ್ ಟ್ರಾಫ್ ನಿರ್ಮಾಣ ಮತ್ತು ಮಳೆಯ ನೀರು ಕೆರೆಗೆ ಹೋಗಲು ಆರ್.ಸಿ.ಸಿ ಎನ್.ಪಿ3 600 ಎಂ.ಎಂ. ಪೈಪ್‌ನ ಅಳವಡಿಕೆ ಮತ್ತು ಇತ್ಯಾದಿ ಕಾಮಗಾರಿಗಳು.

ಸಮಾಲೋಚಕರು ಸಲ್ಲಿಸಿದ್ದ ದೀಪಾಂಜಲಿ ಕೆರೆಯ ವಿವರವಾದ ಯೋಜನಾ ವರದಿಯಲ್ಲಿನ ಕಾಮಗಾರಿಗಳಲ್ಲಿ ಈಗಾಗಲೇ ಮೇಲ್ಕಂಡ ಕಾಮಗಾರಿಗಳನ್ನು ಮೊದಲನೇ ಮತ್ತು ಎರಡನೇ ಹಂತದಲ್ಲಿ ಕೈಗೆತ್ತಿಕೊಂಡು ಕಾಮಗಾರಿಯನ್ನು ಪೂರ್ಣಗೊಳಿಸಿರುವುದರಿಂದ, ಈಗ ಮೂರನೇ ಹಂತದಲ್ಲಿ ರೂ.70.00 ಲಕ್ಷಗಳಿಗೆ ಈ ಕೆಳಕಂಡ ಕೆರೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಅನುವು ಮಾಡಲಾಗಿದೆ.

1. ಹೆಚ್ಚಾದ ಚರಂಡಿ ಮಳೆಯ ನೀರು ಬೃಹತ್ ನೀರುಗಾಲುವೆಗೆ ಹೋಗಲು ಆರ್.ಸಿ.ಸಿ. ಬಾಕ್ಸ್ ಡ್ರೈನ್‌ನ ನಿರ್ಮಾಣ ಕಾಮಗಾರಿ.
2. ಡೀ–ವಾಟರಿಂಗ್ ಮತ್ತು ಡಿವೀಡಿಂಗ್ ಕಾಮಗಾರಿ.
3. ಉಳಿಕೆ ಚೈನ್ ಲಿಂಕ್ ತಂತಿ ಬೇಲಿ ಅಳವಡಿಸುವ ಕಾಮಗಾರಿ.
4. ರಸ್ತೆಯ ಪಕ್ಕದಲ್ಲಿ ಬಾಕ್ಸ್ ಡ್ರೈನ್‌ನ ನಿರ್ಮಾಣ ಮತ್ತು ಕಲ್ವರ್ಟ್ ನಿರ್ಮಾಣ.
5. ಹುಲ್ಲು ಹಾಸು ಮತ್ತು ಉಳಿಕೆ ಕಾಬಲ್ ಸ್ಟೋನ್ ಅಳವಡಿಕೆ.
6. ಕಾವಲುಗಾರರ ಕೊಠಡಿ.

ಈ ಮೇಲ್ಕಂಡ ಕಾಮಗಾರಿಗಳ ರೂ.70.00 ಲಕ್ಷಗಳ ಅಂದಾಜು ಪಟ್ಟಿಯನ್ನು 2011–12ನೇ ಸಾಲಿನ ಲೋಕೋಪಯೋಗಿ ಇಲಾಖೆಯ ಮತ್ತು 2010–11ನೇ ಸಾಲಿನ ಸಣ್ಣ ನೀರಾವರಿ ಇಲಾಖೆಯ ದರಸೂಚಿಯಂತೆ ಸಿದ್ದಪಡಿಸಲಾಗಿದೆ.

ಮಳೆ ಬಂದಾಗ ಎಸ್.ಡಬ್ಲ್ಯೂ.ಡಿ. ನಿಂದ ಮತ್ತು ರೋಷನ್ ನಗರ ರಸ್ತೆಯ ಮೇಲಿನಿಂದ ಬರುವ ನೀರು ಕೆರೆಯ ಮುಂದೆ ಇರುವ ರಸ್ತೆಯ ಮೇಲೆ ನಿಲ್ಲುತ್ತಿದ್ದು, ಎಸ್.ಡಬ್ಲ್ಯೂ.ಡಿ. ಮೂಲಕ ಕೆರೆಯ ಏರಿಯ ಮೇಲೆಲ್ಲಾ ಹರಿಯುತ್ತಿರುತ್ತದೆ ಹಾಗೂ ಕೆರೆಯ ಏರಿ ಮೇಲಿರುವ ಪಾದಚಾರಿ ಮಾರ್ಗದಲ್ಲಿ ನೀರು ನಿಲ್ಲುತ್ತಿರುತ್ತದೆ. ಇದರಿಂದ ಸಾರ್ವಜನಿಕರಿಗೆ ಅನಾನುಕೂಲವಾಗುತ್ತಿದೆ. ಆದ್ದರಿಂದ, ಆರ್.ಸಿ.ಸಿ. ಬಾಕ್ಸ್ ಡ್ರೈನ್ ನಿರ್ಮಾಣ, ಕಲ್ವರ್ಟ್‌ನ್ನು ನಿರ್ಮಿಸುವುದು ಅನಿವಾರ್ಯವಾಗಿರುತ್ತದೆ.

ಈ ಹಿನ್ನೆಲೆಯಲ್ಲಿ, ಸದರಿ ಕೆರೆಯನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ಕೆರೆಯ ಅಭಿವೃದ್ಧಿಯ ಮೂರನೇ ಹಂತದ ಅಭಿವೃದ್ಧಿ ಕಾಮಗಾರಿಗಳನ್ನು ತುರ್ತಾಗಿ ಕೈಗೆತ್ತಿಕೊಂಡು ಅನುಷ್ಠಾನಗೊಳಿಸ ಬೇಕಾಗಿರುತ್ತದೆ. ಸದರಿ ದೀಪಾಂಜಲಿ ಕೆರೆಗೆ ಮೂರನೇ ಹಂತದ ಅಭಿವೃದ್ಧಿ ಕಾಮಗಾರಿಯ ಅಂದಾಜು ಮೊತ್ತ ರೂ.70.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ಸದರಿ ಕಾಮಗಾರಿಗೆ **"ಪಿ2097 ಲೆಕ್ಕ ಶೀರ್ಷಿಕೆಯಲ್ಲಿ"** ಮೀಸಲಿಟ್ಟಿರುವ ಅನುದಾನದಲ್ಲಿ ಕಾಮಗಾರಿ ಸಂಕೇತ ನೀಡಲು ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:24–02–2012 ರ ಟಿಪ್ಪಣಿ.

**ನಿರ್ಣಯ: – ದಿನಾಂಕ: 24–02–2012 ರ ವಿಶೇಷ ಆಯುಕ್ತರ ಟಿಪ್ಪಣಿಯನ್ನು ಸಮಿತಿಯು ಅನುಮೋದಿಸಿತು.**

## 16. ವಿಷಯ ಸಂಖ್ಯೆ:ತೋ/ಸ್ಥಾ/ಸ/62/ 11–12, ದಿನಾಂಕ: 05–03–2012

ವಾರ್ಡ್ ನಂ.103, ಕಾವೇರಿಪುರದ ವ್ಯಾಪ್ತಿಗೊಳಪಡುವ ಮಾಳಗಾಳ ಕೆರೆ (ಬಾಳಯ್ಯನ ಕೆರೆ)ಯ ಭೂವಿನ್ಯಾಸ ಹಾಗೂ ಸಮಗ್ರ ಅಭಿವೃದ್ಧಿ ಎರಡನೇ ಹಂತದ ಕಾಮಗಾರಿಗೆ ಜಾಬ್ ಕೋಡ್ ಪಡೆಯಲಾಗಿರುತ್ತದೆ. ಸದರಿ ಕಾಮಗಾರಿಯನ್ನು ಜರೂರಾಗಿ ನಿರ್ವಹಿಸಬೇಕಾಗಿದ್ದು, ಸಾರ್ವಜನಿಕ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಕಾಮಗಾರಿಯನ್ನು ಮೆ॥ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮುಖೇನ ಕೈಗೆತ್ತಿಕೊಂಡು ನಿರ್ವಹಿಸುವಂತೆ ಪಾಲಿಕೆ ಸದಸ್ಯರು ಮನವಿ ಮಾಡಿಕೊಂಡಿರುತ್ತಾರೆ. ಈ ಹಿನ್ನೆಲೆಯಲ್ಲಿ ಪೂಜ್ಯ ಮಹಾಪೌರರು ದಿನಾಂಕ:23–12–2011ರ ಪತ್ರದಲ್ಲಿ ಸದರಿ ಕಾಮಗಾರಿಗೆ ಅನುದಾನವನ್ನು ನೀಡಿ ಕಾಮಗಾರಿಯನ್ನು ಮೆ॥ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮುಖೇನ ನಿರ್ವಹಿಸುವಂತೆ ಆದೇಶ ನೀಡಿರುತ್ತಾರೆ. ಈ ಕಾಮಗಾರಿಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ನೀಡಬೇಕೆಂದು ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:05–03–2012 ರ ಟಿಪ್ಪಣಿ.

| Sl. No. | Ward No. | Name of Work | Amount in Lakhs |
|---|---|---|---|
| 1. | 103-Kaveripura | Landscape and Comprehensive Development of Malagala Lake (Balayyana Kere), Phase-2. | 98.00 |

**ನಿರ್ಣಯ: – ದಿನಾಂಕ: 05–03–2012 ರ ವಿಶೇಷ ಆಯುಕ್ತರ ಟಿಪ್ಪಣಿಯನ್ನು ಒಪ್ಪುತ್ತಾ, ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಸಮಿತಿಯು ತೀರ್ಮಾನಿಸಿತು.**

17. **ವಿಷಯ ಸಂಖ್ಯೆ:ತೋ/ಸ್ಥಾ/ಸ/63/ 11–12, ದಿನಾಂಕ: 05–03–2012**

ವಾರ್ಡ್ ನಂ.103, ಕಾವೇರಿಪುರದ ವ್ಯಾಪ್ತಿಗೊಳಪಡುವ ಮಾಳಗಾಳ ಕೆರೆ (ಬಾಳಯ್ಯನ ಕೆರೆ)ಯ ಭೂವಿನ್ಯಾಸ ಹಾಗೂ ಸಮಗ್ರ ಅಭಿವೃದ್ಧಿ ಎರಡನೇ ಹಂತದ ಕಾಮಗಾರಿಗೆ ಜಾಬ್ ಕೋಡ್ ಪಡೆಯಲಾಗಿರುತ್ತದೆ. ಸದರಿ ಕಾಮಗಾರಿಯನ್ನು ಜರೂರಾಗಿ ನಿರ್ವಹಿಸಬೇಕಾಗಿದ್ದು, ಸಾರ್ವಜನಿಕ ಕೆಲಸ ಕಾರ್ಯಗಳ ಹಿತದೃಷ್ಠಿಯಿಂದ ಕಾಮಗಾರಿಯನ್ನು ಮೆ॥ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮುಖೇನ ಕೈಗೆತ್ತಿಕೊಂಡು ನಿರ್ವಹಿಸುವಂತೆ ಪಾಲಿಕೆ ಸದಸ್ಯರು ಮನವಿ ಮಾಡಿಕೊಂಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಪೂಜ್ಯ ಮಹಾಪೌರರು ದಿನಾಂಕ:23–12–2011ರ ಪತ್ರದಲ್ಲಿ ಸದರಿ ಕಾಮಗಾರಿಗೆ ಅನುದಾನವನ್ನು ನೀಡಿ ಕಾಮಗಾರಿಯನ್ನು ಮೆ॥ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮುಖೇನ ನಿರ್ವಹಿಸುವಂತೆ ಆದೇಶ ನೀಡಿರುತ್ತಾರೆ. ಈ ಕಾಮಗಾರಿಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ನೀಡಬೇಕೆಂದು ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:05–03–2012 ರ ಟಿಪ್ಪಣಿ.

| Sl.No. | Ward No. | Name of Work | Amount in Lakhs |
|---|---|---|---|
| 1. | 103-Kaveripura | Landscape and Comprehensive Development of Malagala Lake (Balayyana Kere), Phase-1. | 99.00 |

ನಿರ್ಣಯ: – **ದಿನಾಂಕ: 05–03–2012 ರ ವಿಶೇಷ ಆಯುಕ್ತರ ಟಿಪ್ಪಣಿಯನ್ನು ಒಪ್ಪುತ್ತಾ, ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಸಮಿತಿಯು ತೀರ್ಮಾನಿಸಿತು.**

18. **ವಿಷಯ ಸಂಖ್ಯೆ:ತೋ/ಸ್ಥಾ/ಸ/64/ 11–12, ದಿನಾಂಕ: 07–03–2012**

ಜಯನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ವಾರ್ಡ್ ಸಂಖ್ಯೆ.171ರ Providing Eurocon tiles pathway's and rising of chain link fencing construction of watchmen shed rain water harvesting and borewell works in Maruthi Layout parks Gurappanapalya ರ ಕಾಮಗಾರಿಯ ಅಂದಾಜು ಮೊತ್ತ ರೂ.29.50 ಲಕ್ಷಗಳ ಕಾಮಗಾರಿಗೆ ಲೆಕ್ಕ ಶೀರ್ಷಿಕೆ ಪಿ–0311ರಲ್ಲಿ 2011–12ನೇ ಸಾಲಿನ ಕ್ರಿಯಾ ಯೋಜನೆಯಡಿಯಲ್ಲಿ ಕಾಮಗಾರಿ ಹಾಗೂ ಜಾಬ್ ಸಂಖ್ಯೆ ನೀಡಲು ಸ್ಥಳೀಯ ಪಾಲಿಕೆ ಸದಸ್ಯರು ಕೋರಿರುತ್ತಾರೆ.

ವಾರ್ಡ್ ಅನುದಾನವನ್ನು ಹೊರತುಪಡಿಸಿ ಇತರೇ ಅನುದಾನವನ್ನು ಬಳಕೆ ಮಾಡುವ ಮುನ್ನ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿ, ಅನುಮೋದನೆ ಪಡೆಯಬೇಕಾಗಿರುವುದರಿಂದ, ಮೇಲ್ಕಂಡ ಅಂದಾಜು ಮೊತ್ತ ರೂ.29.50 ಲಕ್ಷಗಳಿಗೆ ಅನುಮೋದನೆ ಹಾಗೂ ಜಾಬ್ ಕೋಡ್ ಮತ್ತು ಆಡಳಿತಾತ್ಮಕ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 05–03–2012 ರ ಟಿಪ್ಪಣಿ.

ನಿರ್ಣಯ: – **ದಿನಾಂಕ: 05–03–2012 ರ ವಿಶೇಷ ಆಯುಕ್ತರ ಟಿಪ್ಪಣಿಯನ್ನು ಒಪ್ಪುತ್ತಾ, ಸದರಿ ಕಾಮಗಾರಿಯನ್ನು 2011–12ನೇ ಸಾಲಿನ ಕ್ರಿಯಾ ಯೋಜನೆಯಡಿಯಲ್ಲಿ ಸೇರಿಸಿಕೊಂಡು ಜಾಬ್ ಕೋಡ್ ನೀಡಲು ಸಮಿತಿಯು ಒಪ್ಪಲಾಯಿತು.**

ಕೊನೆಯದಾಗಿ, ಈ ಸಭೆಯಲ್ಲಿ ಮೇಲಿನ ವಿಷಯದ ಬಗ್ಗೆ ಚರ್ಚಿಸುವಾಗ ಅಧಿಕಾರಿಗಳ ಸಲಹೆಗಳು ಮತ್ತು ನ್ಯೂನ್ಯತೆಗಳ ಬಗ್ಗೆ ಕ್ರಮವಹಿಸಿ ಹಾಗೂ ಸಮಿತಿಯ ಸದಸ್ಯರ ಸಲಹೆಗಳನ್ನು ಪಾಲಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಲು ಮಾನ್ಯ ಆಯುಕ್ತರು ಕಾರ್ಯ ಪ್ರವೃತ್ತರಾಗಬೇಕೆಂದು ಕೋರುತ್ತಾ, ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಿ/–
ಅಧ್ಯಕ್ಷರು
ತೋಟಗಾರಿಕೆ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು :–

- ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಆಡಳಿತ ಪಕ್ಷ / ವಿರೋಧ ಪಕ್ಷ ಮತ್ತು ಜೆಡಿಎಸ್ ಪಕ್ಷದ ನಾಯಕರುಗಳಿಗೆ ಕಳುಹಿಸಿದೆ.
- ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಕೋರಿದೆ.
- ಎಲ್ಲಾ ಸ್ಥಾಯಿ ಸಮಿತಿ ಅಧ್ಯಕ್ಷಕರಿಗೆ ಕಳುಹಿಸಲಾಗಿದೆ.
- *ವಿಶೇಷ ಆಯುಕ್ತರು(ಯೋಜನೆ)ರವರ ಗಮನಕ್ಕೆ ತರಲಾಗಿದೆ.*
- ಎಲ್ಲಾ ವಲಯ ಅಪರ/ಜಂಟಿ ಆಯುಕ್ತರು(ಪೂರ್ವ/ಪಶ್ಚಿಮ/ದಕ್ಷಿಣ/ರಾಜರಾಜೇಶ್ವರಿನಗರ/ದಾಸರಹಳ್ಳಿ/ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ) ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
- ಪ್ರಧಾನ ಅಭಿಯಂತರವರಿಗೆ ಕಳುಹಿಸಿದೆ.
- ಮುಖ್ಯ ಲೆಕ್ಕಾಧಿಕಾರಿ ರವರಿಗೆ ಕಳುಹಿಸಿದೆ.
- ಮುಖ್ಯ ಅಭಿಯಂತರರು(ಕೆರೆಗಳು–ಪರಿಸರ ಕೋಶ) ರವರಿಗೆ ಕಳುಹಿಸಿದೆ.
- ಕಾ.ಪಾ.ಅ.(ಕೆರೆಗ**ಳು–ಪರಿಸರ ಕೋಶ) ಹಾಗೂ ಕಾ.ಪಾ.ಅ.(ಮಹಾಲಕ್ಷ್ಮೀಪುರ)ವಲಯರವರಿಗೆ ಕಳುಹಿಸಿದೆ.**
- **ಉಪ ಅರಣ್ಯ ಸಂರಕ್ಷಣಾ**ಧಿಕಾರಿ (ಉತ್ತರ) & (ದಕ್ಷಿಣ) ರವರಿಗೆ ಕಳುಹಿಸಿದೆ.
- ಕಾರ್ಯಪಾಲಕ ಅಭಿಯಂತರರು (ಯೋಜನೆ – ಪೂರ್ವ/ಪಶ್ಚಿಮ/ದಕ್ಷಿಣ/ರಾಜರಾಜೇಶ್ವರಿನಗರ/ದಾಸರಹಳ್ಳಿ/ಬೊಮ್ಮನಹಳ್ಳಿ/ ಯಲಹಂಕ / ಮಹದೇವಪುರ)ರವರಿಗೆ ಕಳುಹಿಸಿದೆ.
- *ತೋಟಗಾರಿಕೆ ಅಧೀಕ್ಷಕರು* (ಪೂರ್ವ/ ಪಶ್ಚಿಮ/ ದಕ್ಷಿಣ/ ರಾಜರಾಜೇಶ್ವರಿನಗರ/ ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ) ರವರಿಗೆ ಕಳುಹಿಸಿದೆ.
- ವಲಯ ಅರಣ್ಯಾಧಿಕಾರಿಗಳು (ಪೂರ್ವ/ ಪಶ್ಚಿಮ/ ದಕ್ಷಿಣ/ ರಾಜರಾಜೇಶ್ವರಿನಗರ/ ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ) ರವರಿಗೆ ಕಳುಹಿಸಿದೆ.
- ಕಛೇರಿ ಪ್ರತಿ.

**ದಿನಾಂಕ: 22–03–2012 ರಂದು ಬೆಳಿಗ್ಗೆ 11.00 ಘಂಟೆಗೆ ತೋಟಗಾರಿಕೆ ಸ್ಥಾಯಿ ಸಮಿತಿ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಉದ್ಯಾನವನಗಳ ಅಭಿವೃದ್ಧಿ ಮತ್ತು ಕೆರೆಗಳು –ಪರಿಸರ ಕೋಶಕ್ಕೆ ಸಂಬಂಧಪಟ್ಟಂತೆ ನಡೆದ ಸಭೆಯ ನಡವಳಿಗಳು**

| ಹಾಜರಿದ್ದ ಸದಸ್ಯರು | | | ಹಾಜರಿದ್ದ ಅಧಿಕಾರಿಗಳು | |
|---|---|---|---|---|
| ಶ್ರೀಯುತರಾದ :– | | | | |
| 1 | ರ.ಆಂಜನಪ್ಪ | ಅಧ್ಯಕ್ಷರು | 1 | ಕೌನ್ಸಿಲ್ ಕಾರ್ಯದರ್ಶಿಗಳು |
| 2 | ಗೀತಾ ಶ್ರೀನಿವಾಸರೆಡ್ಡಿ | | 2. | ಕಾರ್ಯಪಾಲಕ ಅಭಿಯಂತರರು(ವಿದ್ಯುತ್–ದಕ್ಷಿಣ) |
| 3 | ಬಿ.ಆರ್.ಚಂದ್ರಶೇಖರ್ | ಸದಸ್ಯರು | 2 | ಕಾರ್ಯಪಾಲಕ ಅಭಿಯಂತರರು(ಪರಿಸರ ಕೋಶ–ಕೆರೆಗಳು) |
| 4 | ಹೆಚ್.ಎನ್.ಗಂಗಾಧರ್ | ಸದಸ್ಯರು | 3 | ಕಾರ್ಯಪಾಲಕ ಅಭಿಯಂತರರು(ಯೋಜನೆ–ಪೂರ್ವ/ಪಶ್ಚಿಮ / ದಕ್ಷಿಣ/ ರಾಜರಾಜೇಶ್ವರಿನಗರ/ ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ) ವಲಯ |
| 5 | ಎನ್.ಎಂ.ಕೃಷ್ಣಮೂರ್ತಿ | ಸದಸ್ಯರು | | |
| 6 | ಆರ್.ಎಸ್.ಸತ್ಯನಾರಾಯಣ್ | ಸದಸ್ಯರು | 4 | ಸಹಾಯಕ ಕಾರ್ಯಪಾಲಕ ಅಭಿಯಂತರರು (ಯೋಜನೆ–ಪೂರ್ವ/ಪಶ್ಚಿಮ/ ದಕ್ಷಿಣ/ ರಾಜರಾಜೇಶ್ವರಿನಗರ/ ದಾಸರಹಳ್ಳಿ/ ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ) ವಲಯ |
| 7 | ಎಮ್.ಶಿವರಾಜು | ಸದಸ್ಯರು | | |
| 8 | ಎನ್.ಶಕುಂತಲಾ | ಸದಸ್ಯರು | | |
| 9 | ಕೆ.ದೊಡ್ಡಣ್ಣ | ಸದಸ್ಯರು | | |
| 10 | ಅಶ್ವಥ್ ನಾರಾಯಣ್.ಜಿ.ಎ. | ಸದಸ್ಯರು | | |

(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

ಮಾನ್ಯ ಆಧ್ಯಕ್ಷರು ಸಭೆಯ ಅಧ್ಯಕ್ಷತೆ ವಹಿಸಿ ಹಾಜರಿದ್ದ ಸಮಿತಿ ಸದಸ್ಯರು ಮತ್ತು ಅಧಿಕಾರಿಗಳಿಗೆ ಸ್ವಾಗತ ಕೋರಿ ಮಾತನಾಡುತ್ತಾ, ಉದ್ಯಾನವನಗಳ ಅಭಿವೃದ್ಧಿ ಹಾಗೂ (ಕೆರೆಗಳು – ಪರಿಸರ ಕೋಶ) ಕೆರೆಗಳ ಅಭಿವೃದ್ಧಿಗೆ ಸಂಬಂಧಪಟ್ಟಂತೆ 2011–12ನೇ ಸಾಲಿನ ಆಯವ್ಯಯದಲ್ಲಿ ಇರುವ ಅನುದಾನಕ್ಕೆ ಅನುಗುಣವಾಗಿ ಕಾರ್ಯಕ್ರಮ ಪಟ್ಟಿಗೆ ಸಂಬಂಧಪಟ್ಟಂತೆ ಅಧಿಕಾರಿಗಳೊಂದಿಗೆ ಚರ್ಚಿಸಿದರು.

ಸಮಿತಿಯ ಮುಂದಿರುವ ವಿಷಯಗಳ ಬಗ್ಗೆ ಅಧ್ಯಕ್ಷರು, ಸಮಿತಿಯ ಸದಸ್ಯರು ಹಾಗೂ ಅಧಿಕಾರಿಗಳೊಂದಿಗೆ ಚರ್ಚಿಸಿ, ಈ ಕೆಳಕಂಡಂತೆ ತೀರ್ಮಾನವನ್ನು ತೆಗೆದುಕೊಳ್ಳಲಾಯಿತು.

## 1. ವಿಷಯ ಸಂಖ್ಯೆ:ತೋ/ಸ್ಥಾ/ಸ/45/ 11–12, ದಿನಾಂಕ: 31–01–2012

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಜಯನಗರ ವಿಧಾನ ಸಭಾ ಕ್ಷೇತ್ರದ ಬಾಪೂಜಿ ನಗರ, ವಾರ್ಡ್ ಸಂಖ್ಯೆ.134ರ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳಿಗೆ, ಒಟ್ಟು 09 ಕಾಮಗಾರಿಗಳನ್ನು ನಿರ್ವಹಿಸಲು ಸಾರ್ವಜನಿಕರ ಹಿತದೃಷ್ಠಿಯಿಂದ ಹಾಗೂ ಪಾಲಿಕೆಯ ಸದಸ್ಯರ ಕೋರಿಕೆಯ ಮೇರೆಗೆ, ಈ ಕೆಳಕಂಡ ಕಾಮಗಾರಿಗಳಿಗೆ ಅಂದಾಜು ಮೊತ್ತ ರೂ.90.40 ಲಕ್ಷಗಳ ಕಾಮಗಾರಿಗಳನ್ನು ನಿರ್ವಹಿಸಲು ಉದ್ದೇಶಿಸಲಾಗಿದೆ.

| ಕ್ರ. ಸಂ. | ಜಾಬ್ ಸಂಕೇತ | ಕಾಮಗಾರಿ ಹೆಸರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|---|
| 1. | 134–12–000023 | ವಾರ್ಡ್ ನಂ.134 ರಲ್ಲಿ, ಗ್ರಂಥಾಲಯ ಕಟ್ಟಡ ಮತ್ತು ಯೋಗ ಮಂದಿರ ನಿರ್ಮಿಸುವುದು. | 25.00 |

ಮುಂದುವರೆದಿದೆ. . . . . . .

| | | | |
|---|---|---|---|
| 2. | 134–12–000024 | ವಾರ್ಡ್ ನಂ.134 ರಲ್ಲಿ, ಹೊಸದಾಗಿ ನಡೆದಾರಿ ನಿರ್ಮಿಸಿ, ಯುರಾಕಾನ್ ಟೈಲ್ಸ್ ಅಳವಡಿಸುವುದು. | 10.00 |
| 3. | 134–12–000025 | ವಾರ್ಡ್ ನಂ.134 ರಲ್ಲಿ, ಕಾವಲುಗಾರನ ಮನೆ ಮತ್ತು ಶೌಚಾಲಯ ನಿರ್ಮಿಸುವುದು. | 9.00 |
| 4. | 134–12–000026 | ವಾರ್ಡ್ ನಂ.134 ರಲ್ಲಿ, ಮಕ್ಕಳ ಆಟದ ಸಾಮಗ್ರಿಗಳನ್ನು ಅಳವಡಿಸುವುದು. | 20.00 |
| 5. | 134–12–000027 | ವಾರ್ಡ್ ನಂ.134 ರಲ್ಲಿ, ವಾರ್ಡ್ ಕಛೇರಿ ಉದ್ಯಾನವನದಲ್ಲಿ ರಂಗಮಂದಿರ ಮತ್ತು ಗ್ಯಾಲರಿ ನಿರ್ಮಿಸುವುದು. | 6.00 |
| 6. | 134–12–000028 | ವಾರ್ಡ್ ನಂ.134ರ ಬಾಪೂಜಿ ಉದ್ಯಾನವನ ನಿರ್ವಹಣೆ. | 1.43 |
| 7. | 134–12–000029 | ವಾರ್ಡ್ ನಂ.134ರ ಬಾಪೂಜಿ ಉದ್ಯಾನವನದಲ್ಲಿ ಔಷಧಿ ಗಿಡಗಳನ್ನು ನೆಡುವುದು | 1.50 |
| 8. | 134–12–000030 | ವಾರ್ಡ್ ನಂ.134ರ ಬಾಪೂಜಿ ಉದ್ಯಾನವನದಲ್ಲಿ ಸೌರ ದೀಪಗಳನ್ನು ಅಳವಡಿಸುವುದು. | 3.00 |
| 9. | 134–12–000031 | ವಾರ್ಡ್ ನಂ.134 ರಲ್ಲಿ, ಮುನೇಶ್ವರ ದೇವಸ್ಥಾನ ಉದ್ಯಾನವನದ ಅಭಿವೃದ್ಧಿ. | 14.47 |
| | | **ಒಟ್ಟು** | **90.40** |

ಈ ಮೇಲ್ಕಂಡ ಒಟ್ಟು 09 ಕಾಮಗಾರಿಗಳಿಗೆ ಪಾಲಿಕೆಯ 2011–12ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ ಪಿ–0311ರ ಅಡಿಯಲ್ಲಿ ಲಭ್ಯವಿರುವ ಅನುದಾನ ರೂ.90.40ಲಕ್ಷಗಳಲ್ಲಿ ಮಂಜೂರಾಗಿರುವ ಜಾಬ್ ಸಂಕೇತ 134–12–000023 ರಿಂದ 134–12–000031 ವರೆಗೆ ನೀಡಲಾಗಿರುತ್ತದೆ.

ಸದರಿ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಬೇಕಾಗಿರುವುದರಿಂದ, ಪ್ರಸ್ತಾಪಿಸಿರುವ ಒಟ್ಟು 09 ಕಾಮಗಾರಿಗಳನ್ನು ಕೆ.ಆರ್.ಐ.ಡಿ.ಎಲ್.ಸಂಸ್ಥೆಗೆ ವಹಿಸಿಕೊಡಲು ಅನುಮೋದನೆ ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ವಿಶೇಷ ಆಯುಕ್ತರ ದಿನಾಂಕ:31–01–2012 ರ ಟಿಪ್ಪಣಿ.

**ನಿರ್ಣಯ:–** ***ದಿನಾಂಕ:31–01–2012 ರ ವಿಶೇಷ ಆಯುಕ್ತರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.***

## 2. ವಿಷಯ ಸಂಖ್ಯೆ:ತೋ/ಸ್ಥಾ/ಸ/50/ 11–12, ದಿನಾಂಕ: 09–02–2012

ವಾರ್ಡ್ ನಂ.*35 ರಲ್ಲಿ ಇರುವ ಸ್ಯಾಂಕಿ ಕೆರೆಯನ್ನು*, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಅಭಿವೃದ್ಧಿಪಡಿಸಿದ್ದು, ಸದರಿ ಕೆರೆಯಲ್ಲಿ ಸಾರ್ವಜನಿಕರು ವಾಯುವಿಹಾರ, ಯೋಗ ಹಾಗೂ ಮಕ್ಕಳಿಗೆ ಆಟ ಆಡಲು ಆಟವಾಡುವ ಉಪಕರಣಗಳನ್ನು ಅಳವಡಿಸಲಾಗಿದೆ. ಸದರಿ ಕೆರೆ ರಕ್ಷಣೆಗಾಗಿ ರಕ್ಷಣೆ ಸಿಬ್ಬಂದಿಗಳನ್ನು ನಿಯೋಜಿಸಿದ್ದು ಹಾಗೂ ಕೆರೆಯ ನಿರ್ವಹಣೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನಿರ್ವಹಿಸುತ್ತಿರುತ್ತಾರೆ. ಇದರ ವೆಚ್ಚ ಸುಮಾರು ರೂ.16.00 ಲಕ್ಷಗಳಾಗಿದ್ದು, ಇದನ್ನು ಪಾಲಿಕೆ ಭರಿಸುತ್ತಿದೆ.

**ಮುಂದುವರೆದಿದೆ. . . . . .**

RMZ Corp. ಸಂಸ್ಥೆಯವರು, ಕೆರೆಯ ಅಂಗಳದ ಉದ್ಯಾನವನದಲ್ಲಿ ಸಾರ್ವಜನಿಕರಿಗೆ ಆರೋಗ್ಯಕರ ವಾತಾವರಣವನ್ನು ಸೃಷ್ಠಿಸುವ ಸಲುವಾಗಿ, ಸುಮಾರು ರೂ.15.00 ಲಕ್ಷ ಮೌಲ್ಯದ ವಿವಿಧ ನಮೂನೆಯ 10 ವ್ಯಾಯಾಮ ಉಪಕರಣಗಳನ್ನು Intanbul Turkey ದೇಶದಿಂದ ಅಮದು ಮಾಡಿಕೊಂಡು ಅವುಗಳನ್ನು ಸ್ಯಾಂಕಿ ಕೆರೆಯಲ್ಲಿ 1000 ಚದರ ಅಡಿಯ ಪ್ರದೇಶದಲ್ಲಿ ರಬ್ಬರ್ ನೆಲಹಾಸನ್ನು ಹಾಕಿ ಈ ಪ್ರದೇಶಕ್ಕೆ ***"RMZ fitness park"***ಎಂದು ನಾಮಕರಣ ಫಲಕ ಹಾಕಿ ಸಾರ್ವಜನಿಕರಿಗೆ ಉಚಿತವಾಗಿ ಬಳಸಿಕೊಳ್ಳುವಂತೆ ಅನುಕೂಲ ಮಾಡಿಕೊಡುವುದು ಇದರ ಜೊತೆಗೆ ಸದರಿ ಕೆರೆ ಪಶ್ಚಿಮ ಭಾಗದಲ್ಲಿ ಸುಮಾರು 2483 ಚದರ ಅಡಿಗಳಲ್ಲಿ Fencing, Land scape ಅನ್ನು ಮೂರು ವರ್ಷದವರೆಗೂ ಮಾತ್ರ ನಿರ್ವಹಣೆ ಮಾಡಲು ಆಸಕ್ತಿ ಹೊಂದಿದ್ದು, ಇದಕ್ಕೆ ಯಾವುದೇ ಆರ್ಥಿಕ ಪ್ರತಿಫಲಾಪೇಕ್ಷೆ ನಿರೀಕ್ಷಿಸದೆ, ಈ ಕೆರೆಯ ಪಶ್ಚಿಮ ಭಾಗದ ಕಾಲುದಾರಿ ಹಾಗೂ ಉದ್ಯಾನವನವನ್ನು ನಿರ್ವಹಿಸಲು ಒಪ್ಪಿರುತ್ತಾರೆ. ಇದರಿಂದ ಪಾಲಿಕೆಗೆ ವರ್ಷಕ್ಕೆ ರೂ.7.50 ಲಕ್ಷಗಳ ಹೊರೆ ಕಡಿಮೆಯಾಗುತ್ತದೆ.

ಕಂಡಿಕೆ (18)ರಲ್ಲಿ ಮಾನ್ಯ ಆಯುಕ್ತರ ಆದೇಶದಂತೆ ಹಾಗೂ ಕಂಡಿಕೆ (17)ರಲ್ಲಿ ತಿಳಿಸಿರುವಂತೆ RMZ Corp. ಸಂಸ್ಥೆಯವರಿಗೆ, ಕಾರ್ಯಪಾಲಕ ಅಭಿಯಂತರರು–2, ಪರಿಸರ ಕೋಶ ರವರು ದಿನಾಂಕ: 25–01–2012 ರಂದು ಅನುಮತಿ ಪತ್ರ ನೀಡಿದ್ದು, ಈ ಪತ್ರದಲ್ಲಿ ಘಟನೋತ್ತರ ಅನುಮೋದನೆಯನ್ನು ಸ್ಥಾಯಿ ಸಮಿತಿಯಿಂದ ಪಡೆಯಲು ತಿಳಿಸುತ್ತಾ, ಇದರೊಂದಿಗೆ ಪಾಲಿಕೆ ಕೆಲವು ಷರತ್ತುಗಳನ್ನು ಈ ಕೆಳಕಂಡಂತೆ ವಿಧಿಸಲಾಗಿದೆ.

1. ಸ್ಯಾಂಕಿ ಕೆರೆಯ ಹಕ್ಕು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುತ್ತದೆ.
2. ವಿವಿಧ ನಮೂನೆಯ 10 ವ್ಯಾಯಾಮ ಉಪಕರಣಗಳನ್ನು ಅಳವಡಿಸುವಾಗ ಸ್ಯಾಂಕಿ ಕೆರೆಯ ಸ್ವತ್ತಿಗೆ ಯಾವುದೇ ಹಾನಿಯಾಗದಂತೆ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗದಂತೆ ನಿರ್ವಹಣೆ ಮಾಡಬೇಕಿರುತ್ತದೆ.
3. ಈ ಪ್ರದೇಶದಲ್ಲಿ ರಬ್ಬರ್ ನೆಲಹಾಸನ್ನು ಹಾಕಿ ***"RMZ fitness park"***ಎಂದು ನಾಮಕರಣ ಫಲಕ ಹಾಕಲು ಅನುಮೋದನೆ ನೀಡಿದೆ.
4. ಅಳವಡಿಸಿದ ವ್ಯಾಯಾಮ ಉಪಕರಣಗಳ ನಿರ್ವಹಣೆ ಮತ್ತು ಮೇಲ್ವಿಚಾರಣೆ RMZ Corp. ಸಂಸ್ಥೆಯವರದ್ದಾಗಿರುತ್ತದೆ.
5. RMZ Corp. ಸಂಸ್ಥೆಯವರು ಅಳವಡಿಸಿದ ವ್ಯಾಯಾಮ ಉಪಕರಣಗಳನ್ನು ಉಪಯೋಗಿಸುವ ಸೂಚನೆಗಳ ನಾಮಫಲಕ ಅಳವಡಿಸಿ ಹಾಗೂ ಇದನ್ನು ಸಾರ್ವಜನಿಕರಿಗೆ ಉಚಿತವಾಗಿ ಉಪಯೋಗಿಸಲು ಅನುಕೂಲ ಮಾಡಿಕೊಟ್ಟು ಹಾಗೂ ಉಪಯೋಗಿಸುವ ಸಮಯದಲ್ಲಿ ಸಾರ್ವಜನಿಕರಿಗೆ ಯಾವುದೇ ತರದ ಹಾನಿಯಾಗದಂತೆ ಎಚ್ಚರವಹಿಸಬೇಕಾಗಿರುತ್ತದೆ.
6. ಅಳವಡಿಸಿದ ವ್ಯಾಯಾಮ ಉಪಕರಣಗಳ ಸ್ಥಳದಲ್ಲಿ ಯಾವುದೇ ತರದ ಛಾವಣಿಯನ್ನು ಅಳವಡಿಸಬಾರದು ಹಾಗೂ Pergola ಅಳವಡಿಸಲು ಅನುಮೋದನೆ ನೀಡಲಾಗಿದೆ.

**ಮುಂದುವರೆದಿದೆ. . . . . .**

7. ಸ್ಯಾಂಕಿ ಕೆರೆಯ ಪಶ್ಚಿಮ ಭಾಗದಲ್ಲಿ ಇರುವ ಕಾಲುದಾರಿ ಹಾಗೂ ***"RMZ fitness park"*** ಅನ್ನು ಮೂರು ವರುಷ ನಿರ್ವಹಣೆ ಮಾಡಲು ತದನಂತರ, ನಿರ್ವಹಣೆಯನ್ನು ಮುಂದುವರೆಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು RMZ Corp. ಸಂಸ್ಥೆಯವರು ಪರಸ್ಪರ ಒಪ್ಪಂದದ ಮೇರೆಗೆ ಮುಂದುವರೆಸಬಹುದು.
8. ಅಭಿವೃದ್ಧಿಪಡಿಸಬೇಕಾಗಿರುವ/ನಿರ್ವಹಿಸಬೇಕಾಗಿರುವ/ವಿದ್ಯುತ್‌ಚಕ್ತಿ/ನೀರು ಸರಬರಾಜು ಕೆಲಸದ ಬಗ್ಗೆ ಸೂಕ್ತ ರೂಪು-ರೇಷೆಗಳನ್ನು ಸಿದ್ದಪಡಿಸಿ, ಪಾಲಿಕೆಯ ಸಕ್ಷಮ ಅಧಿಕಾರಿಗಳು ನಿರ್ಧರಿಸಿದಂತೆ ನಿರ್ವಹಿಸಬೇಕು.
9. ಸರಿಯಾಗಿ ನಿರ್ವಹಣೆ ಮಾಡಿಲ್ಲದ ಸಮಯದಲ್ಲಿ ಹಾಗೂ ಯಾವುದೇ ಲೋಪವೆಸಗಿದಾಗ RMZ Corp. ಸಂಸ್ಥೆಯವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳ ಜೊತೆಗೆ ಜಂಟಿ ತಪಾಸಣೆಯನ್ನು ಮಾಡಿ, ಆಗ ನೀಡಿದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಿಗಳ ಸೂಚನೆಗಳನ್ನು ಪಾಲಿಸಬೇಕಾಗಿರುತ್ತದೆ.
10. ನಿರ್ವಹಣೆ ಅವಧಿ ಮುಗಿದ ಮೇಲೆ ಹಕ್ಕು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುತ್ತದೆ.
11. ನಿರ್ವಹಣೆ ಅವಧಿ ಮುಗಿದ ಮೇಲೆ ಅಳವಡಿಸಿದ ವ್ಯಾಯಾಮ ಉಪಕರಣಗಳು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸ್ವತ್ತಾಗಿರುತ್ತದೆ.
12. ನಿರ್ವಹಣೆ ಮಾಡುವ ಹಕ್ಕನ್ನು ಬೇರೆ ಸಂಸ್ಥೆಗಳಿಗೆ ಹಸ್ತಾಂತರಿಸಬಾರದು.
13. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಯಾವುದೇ ವೇಳೆಯಲ್ಲಿ ನೀಡಿದ ಅನುಮತಿಯನ್ನು ಯಾವುದೇ ಕಾರಣ ನಿಡದೆ ರದ್ದುಪಡಿಸುವ ಹಕ್ಕನ್ನು ಹೊಂದಿರುತ್ತದೆ.
14. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು BESCOM ಹಾಗೂ BWSSB ಶುಲ್ಕವನ್ನು ಪಾವತಿಸುತ್ತದೆ.
15. RMZ Corp. ಸಂಸ್ಥೆಯವರ ಪ್ರಾಯೋಜಕರ ಪ್ರದರ್ಶನ ನಾಮಫಲಕವು 1.5x0.5 ಅಡಿಯ ಅಳತೆಗಿಂತ ಹೆಚ್ಚಿರಬಾರದು. ಪ್ರಾಯೋಜಕ ಸಂಸ್ಥೆಯ ನಾಮಫಲಕ ಹಾಗೂ ಲೋಗೋ ಪ್ರದರ್ಶನ ಸ್ಥಳವನ್ನು ಆಯುಕ್ತರು ಅಥವಾ ಅವರಿಂದ ಅಧಿಕಾರ ಪಡೆದ ಅಧಿಕಾರಿಗಳಿಂದ ಅನುಮತಿ ಪಡೆಯಬೇಕು.
16. RMZ Corp. ಸಂಸ್ಥೆಯವರು ಮಹಾನಗರ ಪಾಲಿಕೆ/ ಲಾಂಛನವನ್ನು ಕನ್ನಡ ಮತ್ತು ಅಂಗ್ಲ ಭಾಷೆಯಲ್ಲಿ ಪ್ರಮುಖ ಸ್ಥಳದಲ್ಲಿ ಪ್ರದರ್ಶಿಸತಕ್ಕದ್ದು.

ಆದುದರಿಂದ, ಸದರಿ ಸಂಸ್ಥೆ ಯಾವುದೇ ಆರ್ಥಿಕ ಪ್ರತಿಫಲಾಪೇಕ್ಷೆಯನ್ನು ಹೊಂದಿರುವುದಿಲ್ಲವಾದ್ದರಿಂದ M/s.RMZ Corp. ಸಂಸ್ಥೆಯನ್ನು ಮೇಲಿನ ಷರತ್ತುಗಳೊಂದಿಗೆ ಘಟನೋತ್ತರ ಅನುಮೋದನೆಯನ್ನು ನೀಡಲಾಗಿದ್ದು, ಸದರಿ ಅನುಮೋದನೆಯನ್ನು ಅಂಗೀಕರಿಸಲು ಕೋರಿ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:02-02-2012 ರ ಟಿಪ್ಪಣಿ.

***ನಿರ್ಣಯ:-*** ***ದಿನಾಂಕ:02-02-2012 ರ ವಿಶೇಷ ಆಯುಕ್ತರ ಟಿಪ್ಪಣಿಯನ್ನು ಸಮಿತಿಯ ಒಪ್ಪಿದೆ.***

**ಮುಂದುವರೆದಿದೆ. . . . .**

3. <u>ವಿಷಯ ಸಂಖ್ಯೆ:ತೋ/ಸ್ಥಾ/ಸ/53/ 11–12, ದಿನಾಂಕ: 14–02–2012</u>

ಉತ್ತರಹಳ್ಳಿ ಉಪ ವಿಭಾಗ ವ್ಯಾಪ್ತಿಗೆ ಬರುವ ಯಲಚೇನಹಳ್ಳಿ, ವಾರ್ಡ್ ಸಂಖ್ಯೆ.185 ರಲ್ಲಿ 2010–11ನೇ ಸಾಲಿನ ಪ್ರದೇಶಾಭಿವೃದ್ಧಿ ನಿಧಿಯ (ಶಾಸಕರ ಅನುದಾನ) ಯೋಜನೆಯಡಿಯಲ್ಲಿ Improvements to Annyyappa kere park in Ward No.185 (Yelachenahalli) ಕಾಮಗಾರಿಗೆ ಕಾಮಗಾರಿ ಸಂಕೇತ ಸಂಖ್ಯೆ ಮಂಜೂರಾಗಿದ್ದು, ಕಾಮಗಾರಿ ಸಂಕೇತ ಸಂಖ್ಯೆ:185–11–000042. ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮೋದನೆ ಪಡೆದು ಇ_ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಕರೆಯಲಾಗಿ (Tendere Notification No.bbmp/ee/bsd/tend/08/2011–12, d:18–11–2011) ಏಕ ಟೆಂಡರ್ ಸ್ವೀಕೃತವಾಗಿದ್ದು, ಸದರಿ ಟೆಂಡರ್‌ದಾರರಾದ ಶ್ರೀ.ಬಾಲ್‌ರಾಜ್.ಹೆಚ್.ಟಿ. ರವರು ನಮೂದಿಸಿರುವ ದರವು ಅತಿ ಕನಿಷ್ಟವಾಗಿದ್ದು, ಅಂದರೆ ಟೆಂಡರ್ ಮೊತ್ತ ರೂ.4274295.35 (ಅಂದಾಜು ಮೊತ್ತ ರೂ.50.00 ಲಕ್ಷ) ಗಳಾಗಿದ್ದು, ಅನುಮೋದಿತ ಅಂದಾಜು ಪಟ್ಟಿಯ ದರಗಳಿಗಿಂತ ಶೇಕಡ 14.51% ರಷ್ಟು ಕಡಿಮೆಯಾಗಿರುತ್ತದೆ. ಇದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ರೂ.725704.65 ರಷ್ಟು ಉಳಿತಾಯವಾಗುತ್ತದೆ.

| Sl. No. | Name of work | Est.Cost (in Lakhs) | Tender Cost (in Lakhs) | Agency | Remarks |
|---|---|---|---|---|---|
| 1. | Improvements to Annyyappa kere park in Ward No.185 (Yelachenahalli) | 50.00 | 42.74 | Balaraj.H.T. | 14.51% |

ಮೇಲ್ಕಂಡ ಕಾಮಗಾರಿಗೆ ಒಬ್ಬ ಗುತ್ತಿಗೆದಾರರು ಮಾತ್ರ ಟೆಂಡರ್‌ನಲ್ಲಿ ಭಾಗವಹಿಸಿದ್ದು, ಮಾನ್ಯ ಶಾಸಕರು ತುರ್ತಾಗಿ ಕಾಮಗಾರಿ ನಿರ್ವಹಿಸಲು ಕೋರಿರುವುದರಿಂದ ಸಾರ್ವಜನಿಕರ ಹಿತದೃಷ್ಠಿಯಿಂದ ಟೆಂಡರ್ ಅನುಮೋದಿಸಲು ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು(ಯೋಜನೆ)ರವರ ದಿನಾಂಕ:13–02–2012 ರ ಟಿಪ್ಪಣಿ.

**ನಿರ್ಣಯ:–** ***ದಿನಾಂಕ:13–02–2012 ರ ವಿಶೇಷ ಆಯುಕ್ತರ ಟಿಪ್ಪಣಿಯಂತೆ ಟೆಂಡರ್ ದರವನ್ನು ಸಮಿತಿಯು ಅನುಮೋದಿಸಿದೆ.***

4. <u>ವಿಷಯ ಸಂಖ್ಯೆ:ತೋ/ಸ್ಥಾ/ಸ/66/ 11–12, ದಿನಾಂಕ: 13–03–2012</u>

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ, ದಾಸರಹಳ್ಳಿ ವಲಯ ವ್ಯಾಪ್ತಿಯಲ್ಲಿ ಬರುವ ವಾರ್ಡ್ ನಂ.14ರ ನೆಲಮಹೇಶ್ವರಮ್ಮ ದೇವಸ್ಥಾನದ ಪಕ್ಕದಲ್ಲಿರುವ ಉದ್ಯಾನವನವನ್ನು ಅಭಿವೃದ್ಧಿಪಡಿಸುವ ಬಗ್ಗೆ, ಮಾನ್ಯ ಉಚ್ಛ ನ್ಯಾಯಾಲಯದ ಆದೇಶದಲ್ಲಿ ತಿಳಿಸಿರುವಂತೆ, **Improvement of Nelamaheshwaramma Temple park at ward No.14,** ಕಾಮಗಾರಿಯನ್ನು ಕೈಗೊಳ್ಳಲು ಯೋಜನೆ ರೂಪಿಸಲಾಗಿದ್ದು, ಸದರಿ ಕಾಮಗಾರಿಗೆ ತಗಲುವ ವೆಚ್ಚ ರೂ.42.50 ಲಕ್ಷ (ನಲವತ್ತೆರಡು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ) ಗಳಿಗೆ ಅಂದಾಜುಪಟ್ಟಿಯನ್ನು ತಯಾರಿಸಲಾಗಿದೆ.

**ಮುಂದುವರೆದಿದೆ. . . . . .**

ಆ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಕರ್ನಾಟಕ ಮಾನ್ಯ ಉಚ್ಛ ನ್ಯಾಯಾಲಯದ ಆದೇಶದಂತೆ, ದಿನಾಂಕ: 13–04–2011 ರಿಂದ ಆರು ತಿಂಗಳೊಳಗಾಗಿ (ಅಂದರೆ 12.10.2011ರ ಒಳಗಾಗಿ) ಕಾಮಗಾರಿಯನ್ನು ಪೂರ್ಣಗೊಳಿಸಬೇಕಿದ್ದು, ಈಗಾಗಲೇ ಕಾಲಮಿತಿ ಮೀರಿರುವುದರಿಂದ Contempt of Court ಪ್ರಸಂಗವನ್ನು ತಪ್ಪಿಸಿಕೊಳ್ಳುವ ದೃಷ್ಠಿಯಿಂದ ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ 2011–12ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ1850 Creation of Tree park ನಲ್ಲಿ ಭರಿಸಿಕೊಂಡು ಅನುಮೋದಿಸಿ ಜಾಬ್‌ಕೋಡ್ (Job code No.014-12-000034) ನೀಡಿರುತ್ತಾರೆ.

| Sl.No. | Name of works | Est.cost (in lakhs) |
|---|---|---|
| 1. | Improvement of Nelamaheshwaramma Temple park at ward No.14, | 42.00 |
| | **Total Rs.** | **42.00** |

ಈ ಮೇಲ್ಕಂಡ ಕಾಮಗಾರಿಯನ್ನು ಘನ ಉಚ್ಛ ನ್ಯಾಯಾಲಯದ ವಿಶೇಷ ಪ್ರಕರಣವೆಂದು ಪರಿಗಣಿಸಿ ಆಡಳಿತಾತ್ಮಕ / ತಾಂತ್ರಿಕ ಅನುಮೋದನೆಗಾಗಿ ಹಾಗೂ ಘನ ಉಚ್ಛ ನ್ಯಾಯಾಲಯದ ಆದೇಶವನ್ನು ಯಾವುದೇ ವಿಳಂಬಕ್ಕೆ ಎಡೆಮಾಡಿಕೊಡದೆ ಜರೂರಾಗಿ ಅನುಷ್ಠಾನಗೊಳಿಸಬೇಕಾಗಿರುವ ಹಿನ್ನೆಲೆಯಲ್ಲಿ, ಕೆ.ಆರ್.ಐ.ಡಿ.ಎಲ್. ಸಂಸ್ಥೆರವರ ಮೂಲಕ ಕಾಮಗಾರಿ ಕೈಗೊಳ್ಳಲು ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:09–03–2012 ರ ಟಿಪ್ಪಣಿ.

***ನಿರ್ಣಯ:–*** ***ದಿನಾಂಕ:09–03–2012 ರ ವಿಶೇಷ ಆಯುಕ್ತರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.***

## 5. ವಿಷಯ ಸಂಖ್ಯೆ:ತೋ/ಸ್ಥಾ/ಸ/67/ 11–12, ದಿನಾಂಕ: 15–03–2012

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ, ರಾಜರಾಜೇಶ್ವರಿ ವಲಯ ವ್ಯಾಪ್ತಿಯಲ್ಲಿನ ಜೆ.ಪಿ.ಪಾರ್ಕ್‌ನ ಸಮಗ್ರ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳುವ ಸಲುವಾಗಿ ವಿವಿಧ ಹಂತಗಳಲ್ಲಿ ಕಾಮಗಾರಿಯನ್ನು ಕೈಗೆತ್ತಿಕೊಂಡು ನಿರ್ವಹಿಸಲಾಗುತ್ತಿದೆ.

ಜೆ.ಪಿ.ಪಾರ್ಕ್‌ನಲ್ಲಿ ನಿರ್ಮಾಣ ಮಾಡಲಾಗಿರುವ ಆಟದ ಮೈದಾನವನ್ನು ಅಭಿವೃದ್ಧಿಗೊಳಿಸುವ ಸಲುವಾಗಿ ಅಂದಾಜು ಮೊತ್ತ ರೂ.100.00 ಲಕ್ಷಗಳಿಗೆ ಅಂದಾಜುಪಟ್ಟಿಯನ್ನು ತಯಾರಿಸಲಾಗಿದೆ. ಸದರಿ ಅಂದಾಜುಪಟ್ಟಿಯಲ್ಲಿ ಈ ಕೆಳಕಂಡ ಪ್ರಮುಖ ಅಂಶಗಳನ್ನು ಅಳವಡಿಸಿಕೊಳ್ಳಲಾಗಿರುತ್ತದೆ.

1. ಆಟದ ಮೈದಾನದಲ್ಲಿ ಆರ್.ಸಿ.ಸಿ. ಕಾಂಪೌಂಡ್ ಗೋಡೆ ಹಾಗೂ ಗ್ರಿಲ್ ನಿರ್ಮಾಣ.
2. ಆಟದ ಮೈದಾನದಲ್ಲಿ ನಿರ್ಮಿಸಿರುವ ಗ್ಯಾಲರಿಗೆ ಮೇಲ್ಚಾವಣಿ ನಿರ್ಮಾಣ.
3. ವಿದ್ಯುಧೀಕರಣ.

ಜೆ.ಪಿ.ಪಾರ್ಕ್‌ನ ಆಟದ ಮೈದಾನವನ್ನು ಅಭಿವೃದ್ಧಿಗೊಳಿಸುವ ಕಾಮಗಾರಿಗೆ 2011–12ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ–2375 ರ ಅಡಿಯಲ್ಲಿ ರೂ.100.00 ಲಕ್ಷಗಳ ಅನುದಾನವು

**ಮುಂದುವರೆದಿದೆ.** . . . . .

ಲಭ್ಯವಿದ್ದು, ಸದರಿ ಲೆಕ್ಕಶೀರ್ಷಿಕೆಯ ಅಡಿಯಲ್ಲಿ ಜೆ.ಪಿ.ಪಾರ್ಕ್‌ನ ಆಟದ ಮೈದಾನವನ್ನು ಅಭಿವೃದ್ಧಿಗೊಳಿಸುವ ಕಾಮಗಾರಿಯ ರೂ.100.00 ಲಕ್ಷಗಳ ಅಂದಾಜುಪಟ್ಟಿಗೆ 017–12–000058 ರಂತೆ ಜಾಬ್ ಸಂಖ್ಯೆಯನ್ನು ನೀಡಲಾಗಿರುತ್ತದೆ.

ಮೇಲ್ಕಂಡ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳುವುದರಿಂದ ಸಾರ್ವಜನಿಕರಿಗೆ/ಕ್ರೀಡಾ ಪಟುಗಳಿಗೆ ಅನುಕೂಲವಾಗುತ್ತದೆ. ಈ ಹಿನ್ನೆಲೆಯಲ್ಲಿ, ಜೆ.ಪಿ.ಪಾರ್ಕ್‌ನಲ್ಲಿರುವ ಆಟದ ಮೈದಾನದ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲು ರೂ.100.00 ಲಕ್ಷಗಳ ಅಂದಾಜುಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ಟೆಂಡರ್ ಕರೆಯಲು ಅನುಮೋದನೆ ಕೋರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 13–03–2012 ರ ಟಿಪ್ಪಣಿ.

ನಿರ್ಣಯ:– ***ದಿನಾಂಕ:13–03–2012 ರ ವಿಶೇಷ ಆಯುಕ್ತರ ಟಿಪ್ಪಣಿಯನ್ನು ಒಪ್ಪುತ್ತಾ, ಸದರಿ ಕಾಮಗಾರಿಯು ತುರ್ತಾಗಿರುವುದರಿಂದ ಟೆಂಡರ್ ಕರೆದು ಕಾಮಗಾರಿ ಕೈಗೊಳ್ಳಲು ವಿಳಂಬವಾಗುವ ಪ್ರಯುಕ್ತ ಸದರಿ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆಯಿಂದ ನಿರ್ವಹಿಸಲು ಸಮಿತಿಯು ತೀರ್ಮಾನಿಸಿತು.***

## 6. ವಿಷಯ ಸಂಖ್ಯೆ:ತೋ/ಸ್ಥಾ/ಸ/68/ 11–12, ದಿನಾಂಕ: 15–03–2012

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ, ರಾಜರಾಜೇಶ್ವರಿ ವಲಯ ವ್ಯಾಪ್ತಿಯ ಮತ್ತಿಕೆರೆ ಕೆರೆಯನ್ನು ಅಭಿವೃದ್ಧಿಪಡಿಸಲು ಆಡಳಿತ ಪಕ್ಷದ ನಾಯಕರು ಕೋರಿದ ಮೇರೆಗೆ ಮುಖ್ಯ ಅಭಿಯಂತರರು, ಪರಿಸರ ಕೋಶ(ಕೆರೆಗಳು)ರವರು ಮತ್ತಿಕೆರೆ ಕೆರೆಯನ್ನು ಅಭಿವೃದ್ಧಿಪಡಿಸಲು ಅಂದಾಜುಪಟ್ಟಿಯನ್ನು ರೂ.300.00 ಲಕ್ಷಗಳಿಗೆ ತಯಾರಿಸಿ ಅನುಮೋದನೆ ಪಡೆದು ಲೆಕ್ಕಶೀರ್ಷಿಕೆ ಪಿ2581 ರ ಅಡಿಯಲ್ಲಿ ಕಾಮಗಾರಿ ಸಂಕೇತದ ಸಂಖ್ಯೆ:017–12–000060 ಯನ್ನು ಪಡೆಯಲಾಗಿರುತ್ತದೆ.

ಈ ಕೆಳಕಂಡ ಅಂಶಗಳನ್ನು ಬೆಂಗಳೂರು ವೃತ್ತದ ದರಪಟ್ಟಿ 2011–12 ದರಗಳಂತೆ ಅಂದಾಜುಪಟ್ಟಿಯನ್ನು ತಯಾರಿಸಲಾಗಿರುತ್ತದೆ.

- Improvement to take bed
- Wet land
- RCC retaining wall and Chain link fencing
- Tubular steel railings
- SSM Drain
- Water treatment from advance Micro Biological Technology.
- Ornamental Grill.
- Bridge.

ಕೆರೆಯಲ್ಲಿ ಈ ವರ್ಷದ ಮಳೆಗಾಲದಲ್ಲಿ ಮಳೆನೀರು ಸಂಗ್ರಹಿಸಲು ಸಾರ್ವಜನಿಕರು ಕೆರೆಯನ್ನು ಉಪಯೋಗಿಸಲು ಕೊಳಚೆ ನೀರನ್ನು ಶುದ್ಧಿಕರಿಸಿ ಶೇಖರಿಸಿ ಜಲಮಟ್ಟವನ್ನು ಹೆಚ್ಚಿಸುವ ಸಲುವಾಗಿ ಅಭಿವೃದ್ಧಿ ಕಾಮಗಾರಿಯನ್ನು ತೆಗೆದುಕೊಳ್ಳಬೇಕಾಗಿರುತ್ತದೆ. ಸದರಿ ಕಾಮಗಾರಿಗೆ **ಜಾಬ್ ನಂಬರ್ ದೊರೆತಿದ್ದು, ಸದರಿ ಕೆರೆಯ ಅಭಿವೃದ್ಧಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ಟೆಂಡರ್**

**ಮುಂದುವರೆದಿದೆ. . . . . .**

**ಕರೆಯಲು ಅನುಮೋದನೆ ಕೋರಿ,** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:13-03-2012 ರ ಟಿಪ್ಪಣಿ.

ನಿರ್ಣಯ:- ***ದಿನಾಂಕ:13-03-2012 ರ ವಿಶೇಷ ಆಯುಕ್ತರ ಟಿಪ್ಪಣಿಯನ್ನು ಒಪ್ಪುತ್ತಾ, ಈ ವಿಷಯವನ್ನು ಪಾಲಿಕೆಯ ಸಭೆಯ ಮುಂದೆ ತರಲು ಸಮಿತಿಯು ತೀರ್ಮಾನಿಸಿತು.***

## 7. ವಿಷಯ ಸಂಖ್ಯೆ:ತೋ/ಸ್ಥಾ/ಸ/69/ 11-12, ದಿನಾಂಕ: 15-03-2012

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ, ರಾಜರಾಜೇಶ್ವರಿ ವಲಯ ವ್ಯಾಪ್ತಿಯ ಜೆ.ಪಿ.ಪಾರ್ಕ್‌ನಲ್ಲಿರುವ ಕೆರೆಯನ್ನು ಅಭಿವೃದ್ಧಿಪಡಿಸಲು ಆಡಳಿತ ಪಕ್ಷದ ನಾಯಕರು ಕೋರಿದ ಮೇರೆಗೆ, ಮುಖ್ಯ ಅಭಿಯಂತರರು, ಪರಿಸರ ಕೋಶ(ಕೆರೆಗಳು)ರವರು ಜೆ.ಪಿ. ಪಾರ್ಕ್‌ನಲ್ಲಿರುವ ಕೆರೆಯನ್ನು ಅಭಿವೃದ್ಧಿಪಡಿಸಲು ಅಂದಾಜುಪಟ್ಟಿಯನ್ನು ರೂ.300.00 ಲಕ್ಷಗಳಿಗೆ ತಯಾರಿಸಿ ಅನುಮೋದನೆ ಪಡೆದು ಲೆಕ್ಕಶೀರ್ಷಿಕೆ ಪಿ2580 ರ ಅಡಿಯಲ್ಲಿ ಕಾಮಗಾರಿ ಸಂಕೇತದ ಸಂಖ್ಯೆ: 017-12-000059 ಯನ್ನು ಪಡೆಯಲಾಗಿರುತ್ತದೆ.

ಈ ಕೆಳಕಂಡ ಅಂಶಗಳನ್ನು ಬೆಂಗಳೂರು ವೃತ್ತದ ದರಪಟ್ಟಿ 2011-12 ದರಗಳಂತೆ ಅಂದಾಜುಪಟ್ಟಿಯನ್ನು ತಯಾರಿಸಲಾಗಿರುತ್ತದೆ.

- Improvement to take bed
- Walk way
- Boating Jetty
- RCC retaining wall
- Detail estimate for illumination arrangements
- Tubular steel railings
- Chain link fencing
- SSM Drain
- Bridge
- Underground drainage, receiving sewage to treatment plant

ಕೆರೆಯಲ್ಲಿ ಈ ವರ್ಷದ ಮಳೆಗಾಲದಲ್ಲಿ ಮಳೆನೀರು ಸಂಗ್ರಹಿಸಲು ಸಾರ್ವಜನಿಕರು ಕೆರೆಯನ್ನು ಉಪಯೋಗಿಸಲು ಮತ್ತು ನೀರಿನ ಮಟ್ಟ ಹೆಚ್ಚಿಸಲು ಅಭಿವೃದ್ಧಿ ಕಾಮಗಾರಿಯನ್ನು ತೆಗೆದುಕೊಳ್ಳಬೇಕಾಗಿರುತ್ತದೆ. ಸದರಿ ಕಾಮಗಾರಿಗೆ **ಜಾಬ್ ನಂಬರ್ ದೊರೆತಿದ್ದು, ಸದರಿ ಕೆರೆಯ ಅಭಿವೃದ್ಧಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ಟೆಂಡರ್ ಕರೆಯಲು ಅನುಮೋದನೆ ಕೋರಿ,** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 13-03-2012 ರ ಟಿಪ್ಪಣಿ.

ನಿರ್ಣಯ:- ***ದಿನಾಂಕ:13-03-2012 ರ ವಿಶೇಷ ಆಯುಕ್ತರ ಟಿಪ್ಪಣಿಯನ್ನು ಒಪ್ಪುತ್ತಾ, ಈ ವಿಷಯವನ್ನು ಪಾಲಿಕೆಯ ಸಭೆಯ ಮುಂದೆ ತರಲು ಸಮಿತಿಯು ತೀರ್ಮಾನಿಸಿತು.***

ಮುಂದುವರೆದಿದೆ. . . . . .

**8. <u>ವಿಷಯದ ಸಂಖ್ಯೆ:ತೋ/ಸ್ಥಾ/ಸ/70/ 11-12, ದಿನಾಂಕ: 15-03-2012</u>**

ವಾರ್ಡ್ ಸಂಖ್ಯೆ.155ರ ಹನುಮಂತನಗರ ಜಿಂಕೆ ಉದ್ಯಾನವನದಲ್ಲಿ ಲೇಸರ್ ಜೊತೆಗೆ ಮಲ್ಟಿಮಿಡಿಯಾವನ್ನು ಐ.ಎಲ್.ಡಿ.ಎ. ಕಂಟ್ರೋಲರ್ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್ ಇಂಟಿಗ್ರೇಷನ್ ಮಾಡಿ ನೀರಿನ ಕಾರಂಜಿಯ ಮೇಲೆ ಬಿಂಬಿಸುವ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು(ವಿದ್ಯುತ್-ದಕ್ಷಿಣ) ರವರು ಟೆಂಡರ್ ಆಹ್ವಾನಿಸಿರುತ್ತಾರೆ. ಸದರಿ ಟೆಂಡರ್‌ಗೆ ಏಕ ಟೆಂಡರ್ ಮಾತ್ರ ಸ್ವೀಕೃತವಾಗಿದ್ದು, ಕನಿಷ್ಟ ಟೆಂಡರ್‌ದಾರರಾದ ಮೆ॥ ಎಚ್.ಆರ್.ಮೋಹನ್ (Premier world Technology Ltd) ರವರು ಶೇಕಡ 14.16% ರಷ್ಟು ಕಡಿಮೆ ಅಥವಾ ರೂ.75,44,529.00 ಗಳನ್ನು ನಮೂದಿಸಿರುವ ಟೆಂಡರ್‌ನ ಅನುಮೋದನೆಗಾಗಿ, ಕಾರ್ಯಪಾಲಕ ಅಭಿಯಂತರರು(ವಿದ್ಯುತ್-ದಕ್ಷಿಣ) ರವರು ಮಂಡಿಸಿರುತ್ತಾರೆ.

ರೂ.87,90,000.00 ಲಕ್ಷಗಳ ಕಾಮಗಾರಿಗೆ ಕಡಿಮೆ ಕೊಟೇಶನ್ ದರಗಳ ಆಧಾರದ ಮೇಲೆ ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸಿರುತ್ತಾರೆ. ಸದರಿ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಅನುಮೋದನೆಯನ್ನು ಪಡೆದು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಿರುತ್ತಾರೆ. ಟೆಂಡರ್‌ಗಿಟ್ಟ ಮೊತ್ತ ರೂ.87,90,000.00 ಲಕ್ಷ ಮಂಜೂರಾದ ಅಂದಾಜು ಪಟ್ಟಿಯ ದರಗಳಿಗೆ ಗುತ್ತಿಗೆದಾರರಾದ ಮೆ॥ಎಚ್.ಆರ್.ಮೋಹನ್ (Premier world Technology Ltd.,) ರವರು ಶೇಕಡ 14.16% ರಷ್ಟು ಕಡಿಮೆ ಅಥವಾ ರೂ.75,44,529.00 (ರೂ.ಎಪ್ಪತ್ತೈದು ಲಕ್ಷದ ನಲವತ್ತನಾಲ್ಕು ಸಾವಿರದ ಐದುನೂರ ಇಪ್ಪತ್ತೊಂಭತ್ತು ಮಾತ್ರ) ಗಳನ್ನು ನಮೂದಿಸಿದ್ದು, ಕನಿಷ್ಟ ಟೆಂಡರ್‌ದಾರರಾಗಿರುತ್ತಾರೆ.

ಸದರಿ ಟೆಂಡರ್‌ಗೆ ಅನುಮೋದನೆ ಕೋರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ ಮತ್ತು ಹಣಕಾಸು) ರವರ ದಿನಾಂಕ: 13-03-2012 ರ ಟಿಪ್ಪಣಿ.

***<u>ನಿರ್ಣಯ:-</u>*** ***ದಿನಾಂಕ:13-03-2012 ರ ವಿಶೇಷ ಆಯುಕ್ತರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.***

**9. <u>ವಿಷಯ ಸಂಖ್ಯೆ:ತೋ/ಸ್ಥಾ/ಸ/71/ 11-12, ದಿನಾಂಕ: 15-03-2012</u>**

ವಾರ್ಡ್ ಸಂಖ್ಯೆ.155ರ ಹನುಮಂತನಗರ ಜಿಂಕೆ ಉದ್ಯಾನವನದಲ್ಲಿ ಲೇಸರ್ ಜೊತೆಗೆ ಮಲ್ಟಿಮಿಡಿಯಾವನ್ನು ಇಂಟಿಗ್ರೇಷನ್ ಮಾಡಿ ನೀರಿನ ಕಾರಂಜಿಯ ಮೇಲೆ ಬಿಂಬಿಸುವ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು (ವಿದ್ಯುತ್-ದಕ್ಷಿಣ) ರವರು ಟೆಂಡರ್ ಆಹ್ವಾನಿಸಿರುತ್ತಾರೆ. ಸದರಿ ಟೆಂಡರ್‌ಗೆ ಏಕ ಟೆಂಡರ್ ಮಾತ್ರ ಸ್ವೀಕೃತವಾಗಿದ್ದು, ಕನಿಷ್ಟ ಟೆಂಡರ್‌ದಾರರಾದ ಮೆ॥ಎಚ್.ಆರ್.ಮೋಹನ್ (Premier world Technology Ltd) ರವರು ಶೇಕಡ 11% ರಷ್ಟು ಕಡಿಮೆ ಅಥವಾ ರೂ.78,32,000.00 ಗಳನ್ನು ನಮೂದಿಸಿರುವ ಟೆಂಡರ್‌ನ ಅನುಮೋದನೆಗಾಗಿ, ಕಾರ್ಯಪಾಲಕ ಅಭಿಯಂತರರು (ವಿದ್ಯುತ್-ದಕ್ಷಿಣ) ರವರು ಮಂಡಿಸಿರುತ್ತಾರೆ.

ರೂ.88,00,000.00 ಲಕ್ಷಗಳ ಕಾಮಗಾರಿಗೆ ಕಡಿಮೆ ಕೊಟೇಶನ್ ದರಗಳ ಆಧಾರದ ಮೇಲೆ ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸಿರುತ್ತಾರೆ. ಸದರಿ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಹಾಗೂ

**ಮುಂದುವರೆದಿದೆ. . . . . .**

ತಾಂತ್ರಿಕ ಅನುಮೋದನೆಯನ್ನು ಪಡೆದು, ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಿರುತ್ತಾರೆ. ಟೆಂಡರ್‌ಗೆ ಇಟ್ಟ ಮೊತ್ತ ರೂ.88,00,000.00 ಲಕ್ಷ ಮಂಜೂರಾದ ಅಂದಾಜು ಪಟ್ಟಿಯ ದರಗಳಿಗೆ ಗುತ್ತಿಗೆದಾರರಾದ ಮೆ॥ಎಚ್.ಆರ್.ಮೋಹನ್ (Premier world Technology Ltd.,) ರವರು ಶೇಕಡ 11% ರಷ್ಟು ಕಡಿಮೆ ಅಥವಾ ರೂ.78,32,000.00 (ರೂ. ಎಪ್ಪತ್ತೆಂಟು ಲಕ್ಷದ ಮೂವತ್ತೆರೆಡು ಸಾವಿರಗಳು ಮಾತ್ರ) ಗಳನ್ನು ನಮೂದಿಸಿದ್ದು, ಕನಿಷ್ಟ ಟೆಂಡರ್‌ದಾರರಾಗಿರುತ್ತಾರೆ.

ಸದರಿ ಟೆಂಡರ್‌ಗೆ **ಅನುಮೋದನೆ ಕೋರಿ,** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ ಮತ್ತು ಹಣಕಾಸು) ರವರ ದಿನಾಂಕ: 13–03–2012 ರ ಟಿಪ್ಪಣಿ.

**<u>ನಿರ್ಣಯ:–</u>** ***ದಿನಾಂಕ:13–03–2012 ರ ವಿಶೇಷ ಆಯುಕ್ತರ ಟಿಪ್ಪಣಿಯನ್ನು ಸಮಿತಿಯು ಒಪ್ಪಿದೆ.***

**<u>10 ವಿಷಯದ ಸಂಖ್ಯೆ:ತೋ/ಸ್ಥಾ/ಸ/72/ 11–12, ದಿನಾಂಕ: 20–03–2012</u>**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ, ರಾಜರಾಜೇಶ್ವರಿ ವಲಯ ವ್ಯಾಪ್ತಿಯ ವಾರ್ಡ್ ಸಂಖ್ಯೆ.198ರ ಹೆಮ್ಮಿಗೆಪುರ ವ್ಯಾಪ್ತಿಯ ಬಿ.ಸಿ.ಎಂ.ಸಿ. ಬಡಾವಣೆ ಉದ್ಯಾನವನ ಸಂಖ್ಯೆ.1, 3, 4 ರಲ್ಲಿ ಆಸ್ತಿ ಸಂರಕ್ಷಿಸುವ ಕಾಮಗಾರಿ ನಿರ್ವಹಿಸಲು ಅಂದಾಜು ಮೊತ್ತ ರೂ.**80.00** ಲಕ್ಷಗಳೀಗೆ **ಪಿ–0290 BBMP Assets – Fencing and Vacant BBMP Land (including parks, playgrounds and gardens)** ಲೆಕ್ಕಶೀರ್ಷಿಕೆ ಅನುದಾನದಡಿಯಲ್ಲಿ 198–12–000108 ರಂತೆ ಜಾಬ್ ಸಂಖ್ಯೆ ಪಡೆಯಲಾಗಿರುತ್ತದೆ.

ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಆದೇಶದಂತೆ, ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.80.00 ಲಕ್ಷಗಳಾಗಿದ್ದು, 2011–12ನೇ ಸಾಲಿನ ಅನುಮೋದಿತ ಆಯವ್ಯಯದ ಪಿ–0290 ಅಡಿಯಲ್ಲಿ ಮಂಜೂರಾಗಿರುವುದರಿಂದ, ಸದರಿ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ **ಕೋರಿ,** ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 15–03–2012 ರ ಟಿಪ್ಪಣಿ.

**<u>ನಿರ್ಣಯ:–</u>** ***ದಿನಾಂಕ:15–03–2012 ರ ವಿಶೇಷ ಆಯುಕ್ತರು(ಯೋಜನೆ)ರವರ ಟಿಪ್ಪಣಿಯನ್ನು ಒಪ್ಪುತ್ತಾ, ವಾರ್ಡ್ ನಂ.98ರ ಮಾನ್ಯ ಪಾಲಿಕೆ ಸದಸ್ಯರ ಮನವಿ ಮೇರೆಗೆ ಈ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ಮುಖಾಂತರ ಕೈಗೊಳ್ಳಲು ಸಮಿತಿಯು ತೀರ್ಮಾನಿಸಿತು.***

11 **<u>ವಿಷಯದ ಸಂಖ್ಯೆ:ತೋ/ಸ್ಥಾ/ಸ/73/ 11–12, ದಿನಾಂಕ: 21–03–2012</u>**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ, ರಾಜರಾಜೇಶ್ವರಿ ವಲಯ ವ್ಯಾಪ್ತಿಯ ವಾರ್ಡ್ ಸಂಖ್ಯೆ.73, ಕೊಟ್ಟಿಗೆಪಾಳ್ಯ ವ್ಯಾಪ್ತಿಯ 13ನೇ ಮತ್ತು 3ನೇ ಬ್ಲಾಕ್ ನಾಗರಬಾವಿ 2ನೇ ಹಂತದ ಬಡಾವಣೆ ಉದ್ಯಾನವನ ಸಂಖ್ಯೆ.1, 3, 4 ರಲ್ಲಿ ಆಸ್ತಿ ಸಂರಕ್ಷಿಸುವ ಕಾಮಗಾರಿ ನಿರ್ವಹಿಸಲು ಅಂದಾಜು ಮೊತ್ತ ರೂ..**59.50** ಲಕ್ಷಗಳೀಗೆ **ಪಿ–0290 BBMP Assets – Fencing and Vacant BBMP Land (including parks, playgrounds and gardens)** ಲೆಕ್ಕಶೀರ್ಷಿಕೆ ಅನುದಾನದಡಿಯಲ್ಲಿ 198–12–000108 ರಂತೆ ಜಾಬ್ ಸಂಖ್ಯೆ ಪಡೆಯಲಾಗಿರುತ್ತದೆ.

**ಮುಂದುವರೆದಿದೆ. . . . . .**

ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಆದೇಶದಂತೆ, ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.59.50 ಲಕ್ಷಗಳಾಗಿದ್ದು, 2011–12ನೇ ಸಾಲಿನ ಅನುಮೋದಿತ ಆಯವ್ಯಯದ ಪಿ–0290 ಅಡಿಯಲ್ಲಿ ಮಂಜೂರಾಗಿರುವುದರಿಂದ, ಸದರಿ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ಕೋರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 16–03–2012 ರ ಟಿಪ್ಪಣಿ.

**ನಿರ್ಣಯ:–** ***ದಿನಾಂಕ:16–03–2012 ರ ವಿಶೇಷ ಆಯುಕ್ತರ ಟಿಪ್ಪಣಿಯನ್ನು ಒಪ್ಪುತ್ತಾ, ಈ ಕಾಮಗಾರಿಯನ್ನು ತುರ್ತಾಗಿ ನಿರ್ವಹಿಸಬೇಕಾಗಿರುವುದರಿಂದ ಕೆ.ಆರ್.ಐ.ಡಿ.ಎಲ್. ಸಂಸ್ಥೆ ಮುಖೇನ ಕಾಮಗಾರಿಯನ್ನು ಕೈಗೊಳ್ಳಲು ಸಮಿತಿಯು ತೀರ್ಮಾನಿಸಿತು.***

**12. ವಿಷಯದ ಸಂಖ್ಯೆ:ತೋ/ಸ್ಥಾ/ಸ/74/ 11–12, ದಿನಾಂಕ: 21–03–2012**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ, ರಾಜರಾಜೇಶ್ವರಿ ವಲಯ ವ್ಯಾಪ್ತಿಯ ವಾರ್ಡ್ ಸಂಖ್ಯೆ.17ರ ಜೆ.ಪಿ. ಉದ್ಯಾನವನದಲ್ಲಿ Providing balance work of ACP Barricading and other Developments to Musical Fountain area in Ward-17. ಅಂದಾಜು ಮೊತ್ತ ರೂ.89.25ಲಕ್ಷಗಳಿಗೆ ಲೆಕ್ಕಶೀರ್ಷಿಕೆ ಪಿ–0410 Beautification of J.P.Park, Phase - II ಅನುದಾನದಡಿಯಲ್ಲಿ 017–12–000084 ರಂತೆ ಜಾಬ್ ಸಂಖ್ಯೆ ಪಡೆಯಲಾಗಿರುತ್ತದೆ.

ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಆದೇಶದಂತೆ, ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ..89.25 ಲಕ್ಷಗಳಾಗಿದ್ದು, 2011–12ನೇ ಸಾಲಿನ ಅನುಮೋದಿತ ಆಯವ್ಯಯದ ಲೆಕ್ಕಶೀರ್ಷಿಕೆ ಪಿ–0410 ಅಡಿಯಲ್ಲಿ ಮಂಜೂರಾಗಿದ್ದು, ಸದರಿ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ಕೋರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 20–03–2012 ರ ಟಿಪ್ಪಣಿ.

ನಿರ್ಣಯ:– ***ದಿನಾಂಕ:20–03–2012 ರ ವಿಶೇಷ ಆಯುಕ್ತರ ಟಿಪ್ಪಣಿಯನ್ನು ಒಪ್ಪುತ್ತಾ, ಸದರಿ ಕಾಮಗಾರಿಯು ತುರ್ತಾಗಿರುವುದರಿಂದ ಟೆಂಡರ್ ಕರೆದು ಕಾಮಗಾರಿ ಕೈಗೊಳ್ಳಲು ವಿಳಂಬವಾಗುವ ಪ್ರಯುಕ್ತ ಸದರಿ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆಯಿಂದ ನಿರ್ವಹಿಸಲು ಸಮಿತಿಯು ತೀರ್ಮಾನಿಸಿತು.***

**13. ವಿಷಯದ ಸಂಖ್ಯೆ:ತೋ/ಸ್ಥಾ/ಸ/75/ 11–12, ದಿನಾಂಕ: 21–03–2012**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ, ರಾಜರಾಜೇಶ್ವರಿ ವಲಯ ವ್ಯಾಪ್ತಿಯ ವಾರ್ಡ್ ಸಂಖ್ಯೆ.17ರ ಜೆ.ಪಿ. ಉದ್ಯಾನವನದಲ್ಲಿ Providing balance work of shelter to Public Name Board and Other development to Musical Fountain Area in Ward–17. ಅಂದಾಜು ಮೊತ್ತ ರೂ.73.25 ಲಕ್ಷಗಳಿಗೆ ಲೆಕ್ಕಶೀರ್ಷಿಕೆ ಪಿ–2495 Development of Drain and Footpath in Ward No.17 ಅನುದಾನದಡಿಯಲ್ಲಿ 017–12–000071 ರಂತೆ ಜಾಬ್ ಸಂಖ್ಯೆ ಪಡೆಯಲಾಗಿರುತ್ತದೆ.

**ಮುಂದುವರೆದಿದೆ. . . . . .**

ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಆದೇಶದಂತೆ, ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.73.25 ಲಕ್ಷಗಳಾಗಿದ್ದು, 2011–12ನೇ ಸಾಲಿನ ಅನುಮೋದಿತ ಆಯವ್ಯಯದ ಲೆಕ್ಕಶೀರ್ಷಿಕೆ ಪಿ–2495 ಅಡಿಯಲ್ಲಿ ಮಂಜೂರಾಗಿದ್ದು, ಸದರಿ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ಕೋರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 20–03–2012 ರ ಟಿಪ್ಪಣಿ.

<u>ನಿರ್ಣಯ:–</u> ***ದಿನಾಂಕ:20–03–2012 ರ ವಿಶೇಷ ಆಯುಕ್ತರ ಟಿಪ್ಪಣಿಯನ್ನು ಒಪ್ಪುತ್ತಾ, ಸದರಿ ಕಾಮಗಾರಿಯು ತುರ್ತಾಗಿರುವುದರಿಂದ ಟೆಂಡರ್ ಕರೆದು ಕಾಮಗಾರಿ ಕೈಗೊಳ್ಳಲು ವಿಳಂಬವಾಗುವ ಪ್ರಯುಕ್ತ ಸದರಿ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆಯಿಂದ ನಿರ್ವಹಿಸಲು ಸಮಿತಿಯು ತೀರ್ಮಾನಿಸಿತು.***

**<u>14. ವಿಷಯದ ಸಂಖ್ಯೆ:ತೋ/ಸ್ಥಾ/ಸ/76/ 11–12, ದಿನಾಂಕ: 21–03–2012</u>**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ, ರಾಜರಾಜೇಶ್ವರಿ ವಲಯ ವ್ಯಾಪ್ತಿಯ ವಾರ್ಡ್ ಸಂಖ್ಯೆ.17ರ ಜೆ.ಪಿ. ಉದ್ಯಾನವನದಲ್ಲಿ Providing Lathamantapa, grills fixing kerbs painting and other development at Ward No.17. ಅಂದಾಜು ಮೊತ್ತ ರೂ.70.30 ಲಕ್ಷಗಳಿಗೆ ಲೆಕ್ಕಶೀರ್ಷಿಕೆ ಪಿ–0410 Beautification of J.P.Park, Phase-II ಅನುದಾನದಡಿಯಲ್ಲಿ 017–12–000083 ರಂತೆ ಜಾಬ್ ಸಂಖ್ಯೆ ಪಡೆಯಲಾಗಿರುತ್ತದೆ.

ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಆದೇಶದಂತೆ, ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.70.30 ಲಕ್ಷಗಳಾಗಿದ್ದು, 2011–12ನೇ ಸಾಲಿನ ಅನುಮೋದಿತ ಆಯವ್ಯಯದ ಲೆಕ್ಕಶೀರ್ಷಿಕೆ ಪಿ–0410 ಅಡಿಯಲ್ಲಿ ಮಂಜೂರಾಗಿದ್ದು, ಸದರಿ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ಕೋರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 20–03–2012 ರ ಟಿಪ್ಪಣಿ.

ನಿರ್ಣಯ:– ***ದಿನಾಂಕ:20–03–2012 ರ ವಿಶೇಷ ಆಯುಕ್ತರ ಟಿಪ್ಪಣಿಯನ್ನು ಒಪ್ಪುತ್ತಾ, ಸದರಿ ಕಾಮಗಾರಿಯು ತುರ್ತಾಗಿರುವುದರಿಂದ ಟೆಂಡರ್ ಕರೆದು ಕಾಮಗಾರಿ ಕೈಗೊಳ್ಳಲು ವಿಳಂಬವಾಗುವ ಪ್ರಯುಕ್ತ ಸದರಿ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆಯಿಂದ ನಿರ್ವಹಿಸಲು ಸಮಿತಿಯು ತೀರ್ಮಾನಿಸಿತು.***

**<u>15. ವಿಷಯದ ಸಂಖ್ಯೆ:ತೋ/ಸ್ಥಾ/ಸ/77/ 11–12, ದಿನಾಂಕ: 21–03–2012</u>**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ, ರಾಜರಾಜೇಶ್ವರಿ ವಲಯ ವ್ಯಾಪ್ತಿಯ ವಾರ್ಡ್ ಸಂಖ್ಯೆ.17ರ ಜೆ.ಪಿ. ಉದ್ಯಾನವನದಲ್ಲಿ Providing developments at Hongevana in Ward No.17. ಅಂದಾಜು ಮೊತ್ತ ರೂ.87.25 ಲಕ್ಷಗಳಿಗೆ ಲೆಕ್ಕಶೀರ್ಷಿಕೆ ಪಿ–2495 Development of Drain and Footpath in Ward No.17 ಅನುದಾನದಡಿಯಲ್ಲಿ 017–12–000069 ರಂತೆ ಜಾಬ್ ಸಂಖ್ಯೆ ಪಡೆಯಲಾಗಿರುತ್ತದೆ.

**ಮುಂದುವರೆದಿದೆ. . . . .**

ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಆದೇಶದಂತೆ, ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.87.25 ಲಕ್ಷಗಳಾಗಿದ್ದು, 2011–12ನೇ ಸಾಲಿನ ಅನುಮೋದಿತ ಆಯವ್ಯಯದ ಲೆಕ್ಕಶೀರ್ಷಿಕೆ ಪಿ–2495 ಅಡಿಯಲ್ಲಿ ಮಂಜೂರಾಗಿದ್ದು, ಸದರಿ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ಕೋರಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ತೋಟಗಾರಿಕೆ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 20–03–2012 ರ ಟಿಪ್ಪಣಿ.

<u>ನಿರ್ಣಯ:–</u> ***ದಿನಾಂಕ:20–03–2012 ರ ವಿಶೇಷ ಆಯುಕ್ತರ ಟಿಪ್ಪಣಿಯನ್ನು ಒಪ್ಪುತ್ತಾ, ಸದರಿ ಕಾಮಗಾರಿಯು ತುರ್ತಾಗಿರುವುದರಿಂದ ಟೆಂಡರ್ ಕರೆದು ಕಾಮಗಾರಿ ಕೈಗೊಳ್ಳಲು ವಿಳಂಬವಾಗುವ ಪ್ರಯುಕ್ತ ಸದರಿ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್. ಸಂಸ್ಥೆಯಿಂದ ನಿರ್ವಹಿಸಲು ಸಮಿತಿಯು ತೀರ್ಮಾನಿಸಿತು.***

ಕೊನೆಯದಾಗಿ, ಈ ಸಭೆಯಲ್ಲಿ ಮೇಲಿನ ವಿಷಯದ ಬಗ್ಗೆ ಚರ್ಚಿಸುವಾಗ ಅಧಿಕಾರಿಗಳ ಸಲಹೆಗಳು ಮತ್ತು ನ್ಯೂನ್ಯತೆಗಳ ಬಗ್ಗೆ ಕ್ರಮವಹಿಸಿ ಹಾಗೂ ಸಮಿತಿಯ ಸದಸ್ಯರ ಸಲಹೆಗಳನ್ನು ಪಾಲಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಲು ಮಾನ್ಯ ಆಯುಕ್ತರು ಕಾರ್ಯ ಪ್ರವೃತ್ತರಾಗಬೇಕೆಂದು ಕೋರುತ್ತಾ, ಸಭೆಯನ್ನು ಮುಕ್ತಾಯಗೊಳಿಸಿದರು.

ಅಧ್ಯಕ್ಷರು
ತೋಟಗಾರಿಕೆ ಸ್ಥಾಯಿ ಸಮಿತಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು :–

- ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಕೋರಿದೆ.
- ಆಡಳಿತ ಪಕ್ಷ / ವಿರೋಧ ಪಕ್ಷ ಮತ್ತು ಜೆಡಿಎಸ್ ಪಕ್ಷದ ನಾಯಕರುಗಳಿಗೆ ಕಳುಹಿಸಿದೆ.
- ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ವಿಷಯವನ್ನು ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಕೋರಿದೆ.
- ಎಲ್ಲಾ ಸ್ಥಾಯಿ ಸಮಿತಿ ಅಧ್ಯಕ್ಷರಿಗೆ ಕಳುಹಿಸಲಾಗಿದೆ.
- *ವಿಶೇಷ ಆಯುಕ್ತರು(ಯೋಜನೆ)ರವರ ಗಮನಕ್ಕೆ ತರಲಾಗಿದೆ.*
- ಎಲ್ಲಾ ವಲಯ ಅಪರ/ಜಂಟಿ ಆಯುಕ್ತರು(ಪೂರ್ವ/ಪಶ್ಚಿಮ/ದಕ್ಷಿಣ/ರಾಜರಾಜೇಶ್ವರಿನಗರ/ದಾಸರಹಳ್ಳಿ/ಬೊಮ್ಮನಹಳ್ಳಿ/ ಯಲಹಂಕ/ ಮಹದೇವಪುರ) ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
- ಮುಖ್ಯ ಲೆಕ್ಕಾಧಿಕಾರಿ ರವರಿಗೆ ಕಳುಹಿಸಿದೆ.
- ಮುಖ್ಯ ಅಭಿಯಂತರರು(ಕೆರೆಗಳು–ಪರಿಸರ ಕೋಶ) ರವರಿಗೆ ಕಳುಹಿಸಿದೆ.
- ಕಾ.ಪಾ.ಅ.(ಕೆರೆಗಳು–ಪರಿಸರ ಕೋಶ 1, 2, 3, 4, 5,) ರವರಿಗೆ ಕಳುಹಿಸಿದೆ.
- ಕಾ.ಪಾ.ಅ.(ದಕ್ಷಿಣ–ವಿದ್ಯುತ್) ರವರಿಗೆ ಕಳುಹಿಸಿದೆ.
- ಕಾರ್ಯಪಾಲಕ ಅಭಿಯಂತರರು (ಯೋಜನೆ – (ಪೂರ್ವ/ಪಶ್ಚಿಮ/ದಕ್ಷಿಣ/ರಾಜರಾಜೇಶ್ವರಿನಗರ/ದಾಸರಹಳ್ಳಿ/ಬೊಮ್ಮನಹಳ್ಳಿ/ ಯಲಹಂಕ / ಮಹದೇವಪುರ)ರವರಿಗೆ ಕಳುಹಿಸಿದೆ.
- ಕಛೇರಿ ಪ್ರತಿ.